ದೆಹಲಿ ಕರ್ನಾಟಕ ಸಂಘದ

# ಅಭಿಮತ

ನವೆಂಬರ್ 2019
ಬೆಲೆ ರೂ. 1



## ಕನ್ನಡ ತಾಯಿಗೆ ನಮನ




ದಿನಾಂಕ : 19.10.2019ರಂದು ದೆಹಲಿ ಕರ್ನಾಟಕ ಸಂಘ ಮತ್ತು ಗೋಕರ್ಣ ಮಂಡಳ, ನವದೆಹಲಿ ಇದರ ಸಂಯುಕ್ತಾಶ್ರಯದಲ್ಲಿ ನಡೆದ ಗೋಕರ್ಣ ಮಂಡಳದ 40ನೇ ವಾರ್ಷಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ಉಪಕುಲಪತಿ ಪ್ರೊ. ಪರಮೇಶ್ವರ ಎನ್. ಶಾಸ್ತ್ರೀಯವರನ್ನು ಗೋಕರ್ಣ ಮಂಡಳದ ಅಧ್ಯಕ್ಷ ನಾರಾಯಣ ಭಟ್ ಅವರು ಸ್ಮರಣಿಕೆ ನೀಡಿ ಗೌರವಿಸಿದರು.




ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ : 13.10.2019ರಂದು ನಡೆದ ಚುಟುಕು ಸಾಹಿತ್ಯ ಸಮಾವೇಶದಲ್ಲಿ ಭಾಗವಹಿಸಿ ಅಭಿನಂದನೆ ಸ್ವೀಕರಿಸಿದ 40ಕ್ಕೂ ಹೆಚ್ಚು ಮಂದಿ ಸಾಹಿತಿ ಮತ್ತು ಕಲಾವಿದರು ಸಂಘದ ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಮತ್ತು ಪದಾಧಿಕಾರಿಗಳೊಂದಿಗೆ ತೆಗೆದ ಸಮೂಹ ಚಿತ್ರ

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 30 । ಸಂಚಿಕೆ 2
ನವೆಂಬರ್ 2019

**ಪ್ರಧಾನ ಸಂಪಾದಕ**
ಡಾ. ಅವನೀಂದ್ರನಾಥ್ ರಾವ್

**ಸಂಪಾದಕ ಮಂಡಳಿ ಸದಸ್ಯರು**
ಸಂತೋಷ್ ಕುಮಾರ್ ಉಪಾಧ್ಯಾಯ
ಎಸ್. ಕುಮಾರ್
ಚಂದ್ರಶೇಖರ ಜೋಳದರಾಶಿ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ಡಾ. ವೆಂಕಟಾಚಲ ಜಿ. ಹೆಗಡೆ

**ಉಪಾಧ್ಯಕ್ಷರು**
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

**ಪ್ರಧಾನ ಕಾರ್ಯದರ್ಶಿ**
ಸಿ.ಎಂ. ನಾಗರಾಜ

**ಕೋಶಾಧಿಕಾರಿ**
ಆಶಾಲತಾ ಎಂ.

**ಜಂಟಿ ಕಾರ್ಯದರ್ಶಿಗಳು**
ರಾಧಾಕೃಷ್ಣ
ಪೂಜಾ ರಾವ್

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

**ಕಾವಲು ಸಮಿತಿ**
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

# ಸಂಪಾದಕೀಯ

## ಕನ್ನಡ ಧರ್ಮ

ಮತ್ತೆ ಮರಳಿ ಬಂದಿದೆ ಕರುನಾಡ ಉತ್ಸವ. ಪ್ರತಿ ವರುಷ ನವೆಂಬರ್ ತಿಂಗಳ ಮೊದಲ ದಿನ ಕನ್ನಡಿಗರು ಆಚರಿಸುವ ರಾಜ್ಯೋತ್ಸವವನ್ನು ಅಧಿಕೃತವಾಗಿ 'ಕರ್ನಾಟಕ ರಾಜ್ಯೋತ್ಸವ' ಎಂದೇ ಕರೆಯಲಾಗುತ್ತದೆ. ಆದರೆ ಕನ್ನಡಿಗರು ಪರಸ್ಪರ ಶುಭ ಕೋರುವಾಗ 'ಕನ್ನಡ ರಾಜ್ಯೋತ್ಸವದ ಶುಭಾಶಯಗಳು' ಎನ್ನುವುದು ವಿಶೇಷ. ಇಲ್ಲಿ ಕನ್ನಡಿಗರು ಈ ಹಬ್ಬವನ್ನು ಭೌಗೋಳಿಕ ನೆಲೆಯಲ್ಲಿ ಗುರುತಿಸದೆ ಒಂದು ಭಾಷೆಯ ಮೂಲಕ ಸಂಭ್ರಮಿಸುತ್ತಾರೆ ಎನ್ನುವುದು ಗಮನಾರ್ಹ. ಇದು ಕನ್ನಡಿಗರ ಭಾಷಾ ಪ್ರೀತಿ ಮತ್ತು ಅಭಿಮಾನದ ಸಂಕೇತವಾಗಿದೆ. ಜನರನ್ನು ಜಾತಿ, ಮತ, ಪಂಥಗಳಾಚೆಗೆ ಒಂದುಗೂಡಿಸಿದ ಈ ಭಾಷೆ ನಿಜ ಅರ್ಥದಲ್ಲಿ ಕನ್ನಡಿಗರ ಪಾಲಿಗೆ 'ಕನ್ನಡ ಧರ್ಮ' ಎನಿಸಿದೆ.

ಯಾವುದೇ ಹಬ್ಬವನ್ನು ನಾವು ಮೂರು ದಿನಗಳಿಗಿಂತ ಹೆಚ್ಚು ಆಚರಿಸುವುದಿಲ್ಲ. ಆದರೆ ಕನ್ನಡಿಗರು ನವೆಂಬರ್ ತಿಂಗಳು ಪೂರ್ತಿ ಆಚರಿಸುವ ರಾಜ್ಯೋತ್ಸವ ನಿಜಕ್ಕೂ ಅನನ್ಯ. ಕನ್ನಡಿಗರಲ್ಲಿರುವ ನಾಡು–ನುಡಿಯ ಬಗೆಗಿನ ಈ ಬಗೆಯ ಪ್ರೀತಿ ದೇಶದ ಇತರ ಯಾವುದೇ ರಾಜ್ಯಗಳಲ್ಲಿ ಕಾಣಸಿಗದು.

ಈ ಅಭಿಮಾನಕ್ಕೆ ವಿದ್ವಾಂಸರು ಸೇರಿದಂತೆ ಹಲವರು ವಿವಿಧ ಬಗೆಯ ಕಾರಣಗಳನ್ನು ನೀಡುತ್ತಾರೆ. ಸ್ವಾತಂತ್ರ್ಯಪೂರ್ವದಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡನಾಡು ನಂತರ 'ಏಕೀಕೃತ ಕರ್ನಾಟಕ' ಆಗಿ ರಚನೆಯಾದ ಕಾರಣ ಭಾವನಾತ್ಮಕವಾಗಿ ಕನ್ನಡಿಗರು ಒಂದಾಗುವಂತೆ ಮಾಡಿದೆ ಎಂಬುದು ಇಲ್ಲಿನ ಮುಖ್ಯ ವಾದ. ಈ ವ್ಯಾಖ್ಯಾನಗಳ ಹೊರತಾಗಿಯೂ ಕನ್ನಡ ಭಾಷೆಯ ಸೊಗಸು, ಮಾಧುರ್ಯ ಮೊದಲಾದ ಶ್ರೇಷ್ಟ ಲಕ್ಷಣಗಳು ಈ ಭಾಷೆಯನ್ನು ಎಲ್ಲರೂ ಪ್ರೀತಿಸುವಂತೆ ಮಾಡಿದೆ. ಏಕೆಂದರೆ ನಮ್ಮದು ಸವಿಗನ್ನಡ, ಸಿರಿಗನ್ನಡ!

ರಾಜ್ಯೋತ್ಸವದ ಈ ಸಂಭ್ರಮದಲ್ಲಿ ದೆಹಲಿ ಕರ್ನಾಟಕ ಸಂಘವು ಕೂಡಾ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಸಂಗೀತ ನೃತ್ಯ ಕಾರ್ಯಕ್ರಮಗಳಲ್ಲಿ ದೆಹಲಿಯ ಆಸಕ್ತ, ಪ್ರತಿಭಾನ್ವಿತ ಕಲಾವಿದರು ಪಾಲ್ಗೊಳ್ಳುತ್ತಿದ್ದಾರೆ. ತಿಂಗಳ ಆರಂಭದಲ್ಲೇ ಬೆಂಗಳೂರಿನ ಸಾಫಲ್ಯ ರಂಗತಂಡವು ಕಲಾವಿದ, ಸಂಘಟಕ ಎಂ.ಎಸ್. ಸುರೇಶ್ ನೇತೃತ್ವದಲ್ಲಿ ಪ್ರದರ್ಶಿಸಿದ 'ಪ್ರಮೀಳಾರ್ಜುನಿಯಂ' ಮತ್ತು 'ಮತ್ತೆ ಬದುಕಿರಿ' ನಾಟಕಗಳು ಈ ಬಾರಿಯ ರಾಜ್ಯೋತ್ಸವಕ್ಕೆ ಮೆರುಗು ತಂದು ಸ್ಮರಣಾರ್ಹಗೊಳಿಸಿದೆ. ಇಂತಹ ಕಲಾವಿದರಿಂದಲೇ ಕನ್ನಡದ ಸಾಂಸ್ಕೃತಿಕ ವೈಶಿಷ್ಟ್ಯಗಳು ನಾಡು–ಹೊರನಾಡನ್ನು ದಾಟಿ ಜಗತ್ತಿನೆಲ್ಲೆಡೆ ಪಸರಿಸುತ್ತಿದೆ.

ದೆಹಲಿಯಲ್ಲಿ ಕನ್ನಡಕ್ಕಾಗಿ ದುಡಿದ ಮಹನೀಯರನ್ನು ತಿಂಗಳ ಕೊನೆಯಲ್ಲಿ ಪ್ರಶಸ್ತಿ, ಪುರಸ್ಕಾರಗಳಿಂದ ಸನ್ಮಾನಿಸಲಾಗುವುದು. ಬನ್ನಿ. ಈ ಉತ್ಸವದಲ್ಲಿ ಭಾಗಿಯಾಗೋಣ. ಕನ್ನಡ ತಾಯಿಗೆ ನಮ್ಮ ನಮನಗಳು. ನಿಮಗೆಲ್ಲರಿಗೂ ರಾಜ್ಯೋತ್ಸವದ ಶುಭಾಶಯಗಳು.

*ಡಾ. ಅವನೀಂದ್ರನಾಥ್ ರಾವ್*

### ಮುಖಪುಟ ಚಿತ್ರ

ದಿನಾಂಕ : 13.10.2019 ರಂದು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ 'ಚುಟುಕೋತ್ಸವದ ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಲಾವಿದೆ ಶ್ರೀಮತಿ ಪರಿಮಳಾ ಮಹೇಶ್ ರಾವ್ ನೀಡಿದ ನಾಟ್ಯ ಪ್ರದರ್ಶನ.

*ಸಂಪಾದಕ*

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 30 ಸಂಚಿಕೆ 2
ನವೆಂಬರ್ 2019, ಬೆಲೆ ರೂ. 1

ನಮ್ಮನಮ್ಮೊಳಗೆ

# ದೆಹಲಿ ರಾಜ್ಯೋತ್ಸವದ ರಂಗುಗಳು

ಅಭಿಮತಕ್ಕೆ ಮೂವತ್ತು ತುಂಬಿದ ಸಂಭ್ರಮದ ಜೊತೆಜೊತೆಯಲ್ಲೇ ನಾವು ನವೆಂಬರ ತಿಂಗಳನ ಉದ್ದಕ್ಕೂ ರಾಜ್ಯೋತ್ಸವದ ಅಂಗವಾಗಿ ಹಲವಾರು ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಕಾರ್ಯಕ್ರಮಗಳನ್ನು ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ಆಯೋಜಿಸುತ್ತಿದ್ದೇವೆ. ಕಳೆದ ಹಲವಾರು ದಶಕಗಳಿಂದ ಸಂಘದಲ್ಲಿ ಸಂಭ್ರಮದಿಂದ ರಾಜ್ಯೋತ್ಸವವನ್ನು ಆಚರಿಸುವ ಪರಿಪಾಠ ಈಗ ರೂಢಿಗತವಾಗಿದೆ. ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖೆಗಳು ದೆಹಲಿಯ ಕನ್ನಡಿಗರಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ಔತಣವನ್ನು ಬಡಿಸುವತ್ತ ಸಜ್ಜಾಗಿವೆ. ಈ ಎಲ್ಲ ಘನ ಕರ್ನಾಟಕ ಸರಕಾರದ ಇಲಾಖೆಗಳಿಗೆ ನಮ್ಮ ಹೃತ್ಪೂರ್ವಕವಾದ ಕೃತಜ್ಞತೆಗಳು.

ದೆಹಲಿಯಲ್ಲಿ ಕನ್ನಡದ ಕಂಪನ್ನು ಹಬ್ಬಿಸಲು ಕರ್ನಾಟಕ ಸರಕಾರದ ಸಹಾಯ ಹಸ್ತ ಬೇಕೆಬೇಕೆಂದರೂ, ಸ್ಥಳೀಯ ಕನ್ನಡಿಗರ ಮತ್ತು ಕನ್ನಡೇತರರ ಬೆಂಬಲ ಮತ್ತು ಉತ್ಸಾಹಗಳ ಬುಗ್ಗೆಗಳಿಲ್ಲದಿದ್ದರೆ ಈ ರಾಜ್ಯೋತ್ಸವದ ಕಾರ್ಯಕ್ರಮಗಳಿಗೆ ರಂಗೇರುವುದಾದರೂ ಹೇಗೆ? ಕರ್ನಾಟಕದ ಮತ್ತು ಕನ್ನಡದ ಕಂಪೆಂಬುದು ಹಲವಾರು ಬಗೆಗಳಲ್ಲಿ ಪಸರಿಸಿದೆ. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಎಂಬುದು ಇದ್ದದ್ದೇ, ಈ ಎಲ್ಲದರ ಜೊತೆಗೆ ಕರ್ನಾಟಕದ ಹಲವಾರು ಭಿನ್ನ ಭಿನ್ನ ಸಾಂಸ್ಕೃತಿಕ ಆಯಾಮಗಳ ಕುರಿತಾಗಿ ಕಾರ್ಯಕ್ರಮಗಳನ್ನು ದೆಹಲಿಯ ಸ್ಥಳೀಯ ಕನ್ನಡಿಗರ ಭಾಗವಹಿಸುವಿಕೆಯೊಂದಿಗೆ ಆಚರಿಸಲಾಗುತ್ತಿದೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ಸಿಗುವ ವಿಶಿಷ್ಟವಾದ ತಿಂಡಿ-ತಿನಿಸುಗಳನ್ನು ಒಳಗೊಂಡ 'ಆಹಾರ ಮೇಳ' ಈ ರಾಜ್ಯೋತ್ಸವದ ಸಂಭ್ರಮದ ಭಾಗವಾಗಿದೆ. ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ಈ ಮೇಳದ ಕಾರ್ಯಕ್ರಮವನ್ನು ಉತ್ಸಾಹದಿಂದ ಆಚರಿಸಲಾಗುತ್ತಿದೆ. ಸಾವಿರಾರು ದೆಹಲಿ ಕನ್ನಡಿಗರು ಮತ್ತು ಕನ್ನಡೇತರರು ಈ 'ತಿಂಡಿಯ ಹಬ್ಬ'ದಲ್ಲಿ ಭಾಗವಹಿಸಲಿದ್ದಾರೆ.

ಈ ತಿಂಡಿಯ ಹಬ್ಬದೊಂದಿಗೆ 'ಹಾಡಿನ ಹಬ್ಬ'ವಿಲ್ಲದಿದ್ದರೆ ನಮ್ಮ ಮನ ತುಂಬಿ ಬಂದಿತೇ? ಬೆಂಗಳೂರಿನಿಂದ ಬರಲಿರುವ ಕನ್ನಡ ಸಂಗೀತಜ್ಞರ ನೆರವಿನಲ್ಲಿ ದೆಹಲಿಯ ಉತ್ಸಾಹಿ ಕನ್ನಡಿಗರು ತಮ್ಮ ಕಂಠಸಿರಿಯನ್ನು ಕನ್ನಡದ ಹಲವಾರು ಹಾಡುಗಳಿಗೆ ನೀಡಲಿದ್ದಾರೆ. ಇದೊಂದು ದೆಹಲಿ ಕರ್ನಾಟಕ ಸಂಘದ ರಾಜ್ಯೋತ್ಸವದ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಬೇಡಿಕೆಯಲ್ಲಿರುವ ಕಾರ್ಯಕ್ರಮ. ಹೀಗೆ ಮುಂದುವರಿದರೆ... ಹಾಡಿನೊಂದಿಗೆ ನರ್ತನವಿಲ್ಲದಿದ್ದರೆ ಯಾವ ಬಗೆಯ ಸೊಗಸು? ಇದು ಹಾಡಿನ ಮತ್ತು ನರ್ತನದ ಯುಗವೆಂದೆ ಹೇಳಬೇಕು. ಈಗಿನ ತಂತ್ರಜ್ಞಾನದ ಯುಗದಲ್ಲಿ ನಮ್ಮ ಕೈ ಬೆರಳುಗಳ ಮೇಲೆ ಈ ಎಲ್ಲ ಹಾಡು ಮತ್ತು ನರ್ತನಗಳು ಸದಾ ಅಡಕವಾಗಿ ಹೋಗಿವೆ. ಇಲ್ಲಿ-ಅಲ್ಲಿ ಎಲ್ಲೇ ನಾವು ಹೋದರೂ ಹಾಡೆಂಬುದು ನಮ್ಮ ಬೆಂಬಿಡದ ಸಂಗಾತಿ. ಅದರೊಂದಿಗೆ ನರ್ತನವೂ ಸಹ. ಈಗಿನ ಯುವ ಪೀಳಿಗೆ 'ಹಾಡಿನ ನರ್ತನ'ದ ಪೀಳಿಗೆ. ಎಲ್ಲ ಸಂಭ್ರಮದ ಉತ್ಸವಗಳಲ್ಲಿ ಈ ಹಾಡು-ನರ್ತನ ಇದ್ದದ್ದೇ. ಕನ್ನಡದ ಉತ್ಕೃಷ್ಟ ಕಾವ್ಯಸಂಪತ್ತು ಮತ್ತೆ ಜೀವಂತವಾಗುತ್ತಿರುವ ಲಕ್ಷಣವಿದು. ಆಧುನಿಕ ತಂತ್ರಜ್ಞಾನ, ಅದರಲ್ಲೂ ಸಂವಹನ ತಂತ್ರಜ್ಞಾನವೆಂಬುದು ನಮ್ಮೆಲ್ಲರ ಬದುಕನ್ನು ಹಲವಾರು ಬಗೆಗಳಲ್ಲಿ ವಿಶಿಷ್ಟವಾಗಿ ರೂಪಿಸುತ್ತದೆ. ಸಂವಹನ ತಂತ್ರಜ್ಞಾನ ನಮ್ಮ ಭಾಷೆ ಮತ್ತು ಸಂಸ್ಕೃತಿಗಳನ್ನೂ ಆವರಿಸಿಕೊಂಡು ಬಿಟ್ಟಿದೆ. ಈಗಿನ ಸಂವಹನ ತಂತ್ರಜ್ಞಾನಕ್ಕೆ ಹೆಚ್ಚು ಜನರನ್ನು ತಲುಪುವ ತವಕ. ಅದಕ್ಕಾಗಿ ಒಂದು ಕಾಲದಲ್ಲಿ ಆಂಗ್ಲ ಭಾಷೆ ಹಪಹಪಿಸುತ್ತಿದ್ದವರು. ಈಗ ಈ ಎಲ್ಲ ಸಂವಹನ ತಂತ್ರಜ್ಞಾನವನ್ನು ತಮ್ಮ ತಮ್ಮ ಭಾಷೆಗಳಲ್ಲೇ ಉಪಯೋಗಿಸಿಕೊಳ್ಳುವ ಸಾಧ್ಯತೆಗಳು ಇರುವುದರಿಂದ ಅದು ಹೆಚ್ಚು ಜನರನ್ನು ತಲುಪುವಂತಾಗಿವೆ. ಈ ಕಾರಣದಿಂದಲೇ ಕನ್ನಡದ ಹಾಡು, ನರ್ತನ ಹಾಗೂ ಇತರ ಸಾಂಸ್ಕೃತಿಕ ಪರಂಪರೆಗಳು ನಮ್ಮ ರಾಜ್ಯೋತ್ಸವದ ಭಾಗವಾಗಿ ಹೋಗಿವೆ.

ಸಾಂಸ್ಕೃತಿಕ ಆಯಾಮದೊಂದಿಗೆ ದೆಹಲಿ ಕರ್ನಾಟಕ ಸಂಘದ ರಾಜ್ಯೋತ್ಸವದ ಕಾರ್ಯಕ್ರಮದ ಇನ್ನೊಂದು ಅವಿಭಾಜ್ಯ ಅಂಗವೆಂಬುದು 'ಪ್ರತಿಭಾ ಪುರಸ್ಕಾರ' ಮತ್ತು 'ವಿದ್ಯಾರ್ಥಿ ವೇತನ' ವಿತರಣೆ. ಇದು ಸಂಘದಲ್ಲಿ ಹಲವಾರು ದಶಕಗಳಿಂದ ನಡೆದು ಬಂದ ಕಾರ್ಯಕ್ರಮ. ದೆಹಲಿಯ ವಿವಿಧ ಭಾಗಗಳಲ್ಲಿ ಓದುತ್ತಿರುವ ಮಕ್ಕಳಿಗೆ ಮತ್ತು ಯುವ ಪ್ರತಿಭೆಗಳನ್ನು ಗುರಿತಿಸಿ ಅವರಿಗೆ ಬೇಕಾದ ಪುಟ್ಟ ಅನುದಾವನ್ನು ನೀಡುವ ಕಾರ್ಯಕ್ರಮವೂ ಈ ನಮ್ಮ ರಾಜ್ಯೋತ್ಸವ ಕಾರ್ಯಕ್ರಮದ ಅಂಗವಾಗಿದೆ. ಈ ಎಲ್ಲ ನಾಲ್ಕಾರು ದಶಕಗಳಲ್ಲಿ ದೆಹಲಿ ಕರ್ನಾಟಕ ಸಂಘ ಸಾವಿರಾರು ಮಕ್ಕಳಿಗೆ ಈ ಬಗೆಯ ಸಹಾಯಹಸ್ತವನ್ನು ನೀಡಿದೆ. ದೆಹಲಿಯ ವಿಸ್ತೃತ ರಾಜಧಾನಿಯ ಭಾಗದಲ್ಲಿರುವ ದೆಹಲಿ ಕನ್ನಡಿಗರ ಮಕ್ಕಳಿಗೆ 'ಅರ್ಹತೆ' ಮತ್ತು 'ಅಗತ್ಯತೆ'ಯ ಆಧಾರದ ಮೇಲೆ ಈ ಸ್ಕಾಲರ್‌ಶಿಪ್‌ಗಳನ್ನು ನೀಡಲಾಗುತ್ತದೆ.

ಎಲ್ಲದಕ್ಕೂ ಮಿಗಿಲಾಗಿ ದೆಹಲಿ ಕರ್ನಾಟಕ ಸಂಘ ನೀಡುವ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ಹಲವಾರು ಕಾರಣಗಳಿಂದಾಗಿ ಮುಖ್ಯವಾದದ್ದು ಮತ್ತು ಪ್ರಮುಖವಾದದ್ದು. ದೆಹಲಿಯ ಪರಿಸರದಲ್ಲಿ ಕನ್ನಡಿಗರಾಗಿ ಮತ್ತು ಕನ್ನಡ ಕುರಿತಾಗಿ ಕೆಲಸ ಮಾಡಿದ ಹಿರಿಯರನ್ನು 'ವಿಶಿಷ್ಟ ದೆಹಲಿ ಕನ್ನಡಿಗ'ರೆಂದು ಸನ್ಮಾನಿಸುವ ಕಾರ್ಯಕ್ರಮವೂ ಸಹ ನಮ್ಮ ರಾಜ್ಯೋತ್ಸವದ ಭಾಗವಾಗಿದೆ.

ನವೆಂಬರ್ ತಿಂಗಳ ಉದ್ದಕ್ಕೂ ಹರಿಯುವ ಈ ಎಲ್ಲ ಕಾರ್ಯಕ್ರಮಗಳು ದೆಹಲಿ ಕರ್ನಾಟಕ ಸಂಘವಲ್ಲದೆ, ದೆಹಲಿಯ ಇತರ ಕನ್ನಡ ಸಂಘಟನೆಗಳಾದ ಜನಕಪುರಿ, ನೊಯಿಡಾ, ಗುರುಗ್ರಾಮ, ಶರಾವತಿ (ಜೆಎನ್‌ಯು), ಭಿವಾಡಿ. . .ಹೀಗೆ ಉತ್ತರ ಭಾರತದ ಹಲವಾರು ಭಾಗಗಳಲ್ಲಿ ನಡೆಯಲಿರುವ ರಾಜ್ಯೋತ್ಸವದ ಕಾರ್ಯಕ್ರಮಗಳಿಗೆ ಪೂರಕವಾಗಿವೆ. ನವೆಂಬರ್‌ನಲ್ಲಿ ಜೋರಾಗಿ 'ಕನ್ನಡ ಡಿಂಡಿಮ'ವನ್ನು ಬಾರಿಸಿ ನಂತರದಲ್ಲಿ ಇಡೀ ವರುಷ ನಾವು ಕೈ ಕಟ್ಟಿ ಕೂರುವಂತಾಗಬಾರದು. ರಾಜ್ಯೋತ್ಸವದ ಈ ರಂಗುಗಳು ನಮ್ಮನ್ನು ಸದಾ ಕಾಲ ಆವರಿಸಿಕೊಳ್ಳುವಂತಾಗಬೇಕು.

***ಡಾ. ವೆಂಕಟಾಚಲ ಹೆಗಡೆ***
***ಅಧ್ಯಕ್ಷರು***

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ,

ನವೆಂಬರ್ ಒಂದರಂದು ರಾಷ್ಟ್ರಧ್ವಜಾರೋಹಣ ಮತ್ತು ಮೂರರಂದು ಸಾಫಲ್ಯ ರಂಗತಂಡ ಬೆಂಗಳೂರು ಹಾಗೂ ಎಂ.ಎನ್. ಸುರೇಶ್ ಮತ್ತು ತಂಡದಿಂದ ಎರಡು ಅತ್ಯುತ್ತಮ ನಾಟಕ ಪ್ರದರ್ಶನದೊಂದಿಗೆ ನವೆಂಬರ್ ತಿಂಗಳ ಪ್ರತೀ ಭಾನುವಾರ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದರೊಂದಿಗೆ 64ನೇ ಕರ್ನಾಟಕ ರಾಜ್ಯೋತ್ಸವವನ್ನು ಸಾಂಕೇತಿಕವಾಗಿ ಉದ್ಘಾಟಿಸಲಾಗಿದೆ. ನವೆಂಬರ್ ತಿಂಗಳು ಒಂದು ರೀತಿಯಲ್ಲಿ ಕನ್ನಡದ ಹಬ್ಬ. ದೆಹಲಿಯ ಕರ್ನಾಟಕ ಸಂಘವಲ್ಲದೇ ದೆಹಲಿಯ ಸುತ್ತಮುತ್ತ ಇರುವ ಎಲ್ಲ ಕನ್ನಡ ಸಂಘಟನೆಗಳೂ ಕೂಡಾ ಅತ್ಯಂತ ಉತ್ಸಾಹದಿಂದ ಈ ರಾಜ್ಯೋತ್ಸವವನ್ನು ಆಚರಿಸುತ್ತವೆ.

ನವೆಂಬರ್ ತಿಂಗಳ ಮುಂದಿನ ದಿನಗಳಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ವಾರ್ತಾಕೇಂದ್ರ ನವದೆಹಲಿ, ಜೊತೆಗೂಡಿ ನಿಮ್ಮೊಂದಿಗೆ ಝೀ ಕನ್ನಡದ ಕಾಮಿಡಿ ಕಿಲಾಡಿಗಳು ಮತ್ತು ಸರಿಗಮಪದ ಉದಯೋನ್ಮುಖ ಪ್ರತಿಭೆಗಳಿಂದ ಸಂಗೀತ ಕಾರ್ಯಕ್ರಮ, ಸಂಗೀತ ತರಬೇತಿ ಪಡೆದ ಸಂಘದ ಸದಸ್ಯರಿಂದ ಹಾಗೂ ಸಂಗೀತ ತರಬೇತಿ ನೀಡಿದ ಟಿ.ಎಸ್. ರಮೇಶ್ ತಂಡದಿಂದ ಕಾರ್ಯಕ್ರಮ ಹಾಗೂ ವಿದ್ಯಾರ್ಥಿ ವೇತನ ವಿತರಣೆ, ಸಂಘದ ಸದಸ್ಯರುಗಳೇ ತಯಾರಿಸಿದ ಕರ್ನಾಟಕದ ವೈವಿಧ್ಯಮಯ ತಿಂಡಿ–ತಿನಿಸುಗಳ ಆಹಾರ ಮೇಳ, ನೃತ್ಯ ತರಬೇತಿ ಪಡೆದ ಸ್ಥಳೀಯ ಕಲಾವಿದರಿಂದ ನೃತ್ಯ ಪ್ರದರ್ಶನ, ಜಾನಪದ ಗೀತೆಗಳ ಗಾಯನ, ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ ಈ ಎಲ್ಲ ಕಾರ್ಯಕ್ರಮಗಳು ರಾಜ್ಯೋತ್ಸವದ ಅಂಗವಾಗಿ ನಡೆಯಲಿವೆ.

ಡಿಸೆಂಬರ್ ತಿಂಗಳಲ್ಲಿ ಆಟೋಟ ಮತ್ತು ಕ್ರಿಕೆಟ್ ಸ್ಪರ್ಧೆ ನಡೆಯಲಿವೆ. ಈ ಎಲ್ಲ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿ ಎಂದು ಎಲ್ಲ ಸದಸ್ಯರಲ್ಲಿ ವಿನಂತಿ.

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

**ರಾಜ್ಯೋತ್ಸವದ ವಿಶೇಷ ಕಾರ್ಯಕ್ರಮಗಳು**

**16 ನವೆಂಬರ್ 2019** ಶನಿವಾರ ಸಂಜೆ : 5.00 ಗಂಟೆಗೆ

### ಸಂಗೀತ ಸಂಜೆ



ಹರೀಶ ನರಸಿಂಹ
ಗಾಯಕರು



ಟಿ.ಎಸ್. ರಮೇಶ್
ಕೀಬೋರ್ಡ್



ರಾಘವೇಂದ್ರ ರಂಗಧೋಳ್
ತಬಲಾ

**ಸಂಗೀತ ತರಬೇತಿ ಪಡೆದ ದೆಹಲಿಯ ಕಲಾವಿದರಿಂದ ಸಂಗೀತ ಕಾರ್ಯಕ್ರಮ. ತರಬೇತುದಾರ ಟಿ.ಎಸ್. ರಮೇಶ್ ಮತ್ತು ತಂಡದಿಂದ ವಿಶೇಷ ಕಾರ್ಯಕ್ರಮ ಮತ್ತು ವಿದ್ಯಾರ್ಥಿ ವೇತನ ವಿತರಣೆ**

**24 ನವೆಂಬರ್ 2019** ಭಾನುವಾರ, ಬೆಳಿಗ್ಗೆ : 10.30ಗಂಟೆಗೆ

**ಸಂಘದ ಆವರಣದಲ್ಲಿ**

### ಆಹಾರ ಮೇಳ

**ಕರ್ನಾಟಕದ ವೈವಿಧ್ಯಮಯ ತಿಂಡಿ ತಿನಿಸುಗಳ ಪ್ರದರ್ಶನ**

**30 ನವೆಂಬರ್ 2019** ಶನಿವಾರ, ಸಂಜೆ : 4.00ಗಂಟೆಗೆ

### ನೃತ್ಯ ಕಾರ್ಯಕ್ರಮ

**ತರಬೇತಿ ಪಡೆದ ದೆಹಲಿ ಕಲಾವಿದರಿಂದ**

**ಹಾಗೂ**

**ಸಾಧಕರಿಗೆ 'ವಿಶಿಷ್ಟ ಕನ್ನಡಿಗ ಪ್ರಶಸ್ತಿ' ಪ್ರದಾನ**

**ವಿಶೇಷ ಸೂಚನೆ : ನೃತ್ಯ ತರಬೇತಿ ಶಿಬಿರ**

ದೆಹಲಿ ಕರ್ನಾಟಕ ಸಂಘದಲ್ಲಿ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ 'ನೃತ್ಯ ತರಬೇತಿ' ಶಿಬಿರವನ್ನು ಆಯೋಜಿಸಿದೆ. ತರಬೇತಿ ನವೆಂಬರ್ 26, 27, 28 ಮತ್ತು 29ರಂದು ನಡೆಯಲಿದೆ.

ನವೆಂಬರ್ 30ರಂದು ನೃತ್ಯ ತರಬೇತಿ ಪಡೆದ ಕಲಾವಿದರಿಂದ ಮತ್ತು ತರಬೇತುದಾರರಿಂದ ಕಾರ್ಯಕ್ರಮ ನಡೆಯಲಿದೆ. ತರಬೇತಿಯಲ್ಲಿ ಭಾಗವಹಿಸಲಿಚ್ಛಿಸುವ ಸಂಘದ ಸದಸ್ಯರು, ಸಂಘದ ಕಾರ್ಯಾಲಯದಲ್ಲಿ ದಿನಾಂಕ : 25.11.2019ರ ಒಳಗಾಗಿ ತಮ್ಮ ಹೆಸರನ್ನು ನೋಂದಾಯಿಸಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಶ್ರೀ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ –9968074409/ 9811325440 ಮತ್ತು ಶ್ರೀಮತಿ ಪೂಜಾ ರಾವ್: 9810882498

**ಪ್ರಧಾನ ಕಾರ್ಯದರ್ಶಿ**

# ಮೂವತ್ತಕ್ಕೆ ಕಾಲಿಟ್ಟ ಮುಖವಾಣಿ!




**'ಅಭಿಮತ 30' ಅವಲೋಕನದಲ್ಲಿ ಭಾಗವಹಿಸಿದವರು**

ಮಹಾತ್ಮಾ ಗಾಂಧಿ, ಲಾಲ್ ಬಹಾದೂರ್ ಶಾಸ್ತ್ರಿಯವರ ಜನ್ಮದಿನದಂದೇ ತನ್ನ ಜನ್ಮದಿನವನ್ನೂ ಆಚರಿಸಿಕೊಳ್ಳುವ ಸಂಘದ ಮುಖವಾಣಿ ಅಭಿಮತಕ್ಕೆ ಇದೀಗ 30ಕ್ಕೆ ಕಾಲಿಟ್ಟ ಸಂಭ್ರಮ! ದಿನಾಂಕ 02.10.2019ರ ಸಂಜೆ ಸಂಘದ ಸೆಮಿನಾರ್ ಹಾಲ್‌ನಲ್ಲಿ ತಾನು ನಡೆದು ಬಂದ ಹಾದಿಯನ್ನು ತನ್ನ ಸಹಚರಿಗಳೊಂದಿಗೆ, ಹಿತೈಶಿಗಳೊಂದಿಗೆ ಅವಲೋಕಿಸುವ ಸುಸಂದರ್ಭಕ್ಕೆ ಸಾಕ್ಷಿಯಾಯಿತು ಅಭಿಮತ.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಸಂಘದ ಉಪಾಧ್ಯಕ್ಷ ಮತ್ತು ಅಭಿಮತದ ಪ್ರಧಾನ ಸಂಪಾದಕ ಡಾ. ಅವನೀಂದ್ರನಾಥ ರಾವ್ ಅವರು ಸ್ವಾತಂತ್ರ್ಯ ಪೂರ್ವದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲೇ 150 ಪತ್ರಿಕೆಗಳಿದ್ದವು ಎಂಬುದು ಕನ್ನಡಿಗರಿಗೆ ಪತ್ರಿಕೋದ್ಯಮದ ಕುರಿತು ವಿಶೇಷ ಆಸಕ್ತಿ ಇತ್ತು ಎಂಬುದಕ್ಕೆ ಸಾಕ್ಷಿಯಾಗಿದೆ, ಅದರಂತೆ ದೆಹಲಿಯಂಥ ದೂರದ ಸ್ಥಳವೊಂದರಲ್ಲಿ ಕನ್ನಡಿಗರಿಗಾಗಿಯೇ ಒಂದು ಪತ್ರಿಕೆಯನ್ನು ತರುವ ಸಾಹಸಕ್ಕೆ ಅಂದಿನ ಅಧ್ಯಕ್ಷ ಎನ್.ಪಿ. ಭಟ್, ಕಾರ್ಯದರ್ಶಿ ಸಿ.ವಿ. ಗೋಪಿನಾಥ್ ಹಾಗೂ ಪ್ರಪ್ರಥಮ ಸಂಪಾದಕರಾಗಿದ್ದ ಡಾ. ವೆಂಕಟಾಚಲ ಹೆಗಡೆಯವರು ಕೈ ಹಾಕಿದ್ದು ರೋಮಾಂಚನಕರ ಸಂಗತಿ ಎಂದರು. ಅಭಿಮತಕ್ಕೆ ಸಾಹಿತ್ಯ ಸ್ಪರ್ಶ ನೀಡಿದ ಡಾ. ಪುರುಷೋತ್ತಮ ಬಿಳಿಮಲೆ, ಪ್ರೊ. ಟಿ.ಎಸ್ ಸತ್ಯನಾಥ್, ಅಹಲ್ಯಾ ಚಿಂತಾಮಣಿ, ಉಷಾ ಭರತಾದ್ರಿಯವರ ಕೊಡುಗೆಯನ್ನು ಈ ಸಂದರ್ಭದಲ್ಲಿ ಸ್ಮರಿಸಿದ ಅವನೀಂದ್ರನಾಥ್ ಅವರು ಸುವರ್ಣ ಕರ್ನಾಟಕ ಉತ್ಸವದ ಸಂದರ್ಭದಲ್ಲಿ ತಾಯ್ನಾಡಿನ ಹಿರಿಮೆ ಗರಿಮೆಗಳನ್ನು ಸಮರ್ಥವಾಗಿ ದಾಖಲಿಸುವಲ್ಲಿ ಅಭಿಮತ ಹೇಗೆ ಯಶಸ್ವಿಯಾಯಿತು ಎಂಬುದನ್ನು ನೆನಪಿಸಿಕೊಂಡರು. ಕಳೆದ ಮೂವತ್ತು ವರ್ಷಗಳಲ್ಲಿ ಸಂಘದ ಮುಖವಾಣಿಗಾಗಿ ಕನಿಷ್ಠ 30 ಜನರು ದುಡಿದಿರಬಹುದು ಎಂದು ಹೇಳಿದ ಅವರು ಈ ಸಂದರ್ಭದಲ್ಲಿ ಸಂಪಾದಕರಾಗಿ ದುಡಿದ ಬಾಲಕೃಷ್ಣ ನಾಯಕ್, ಚೆನ್ನು ಎಸ್. ಮಠದ್,  ವಸಂತ ಶೆಟ್ಟಿ ಬೆಳ್ಳಾರೆ ಇತ್ಯಾದಿ ಮಹನೀಯರ ಕೊಡುಗೆಯನ್ನು ಶ್ಲಾಘಿಸಿದರು.

ಮಾಜಿ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆಯವರು ತಮ್ಮ ಮತ್ತು ಅಭಿಮತದ ಆರಂಭಿಕ ದಿನಗಳನ್ನು ಸ್ಮರಿಸುತ್ತ ಅಂದು ತಾವು ಅಭಿಮತದ ಒಂದು ಲೇಖನದಲ್ಲಿ 'ದೆಹಲಿ ಕನ್ನಡಿಗರು ಹೃದಯ ಶ್ರೀಮಂತರು' ಎಂದು ಬರೆದಿದ್ದಕ್ಕೆ ಹಿರಿಯರಾದ ಎನ್.ಪಿ. ಭಟ್ಟರ, ಸಿ.ವಿ.ಗೋಪಿನಾಥರ ನಡವಳಿಕೆಯೇ ಕಾರಣವಾಗಿತ್ತು. ಚುನಾವಣೆ ಸಂದರ್ಭದಲ್ಲಿ ಭಿನ್ನಾಭಿಪ್ರಾಯ ಹೊಂದಿದ್ದರೂ ಅವರು ತಮ್ಮನ್ನು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮುಕ್ತವಾಗಿ ಆಮಂತ್ರಿಸುತ್ತಿದ್ದರು. ವಿವಿಧ ಸಂಪಾದಕರ ಅವಧಿಯಲ್ಲಿ ಪತ್ರಿಕೆ ಬೆಳೆದಿದೆ. ತಮ್ಮ ಸಂಪಾದಕತ್ವದ ಅವಧಿಯಲ್ಲಿ ಅಭಿಮತಕ್ಕೆ ತೀವ್ರ ವಿರೋಧಗಳ ನಡುವೆಯೂ ಬದಲಾವಣೆ ತರಲು ಸಾಧ್ಯವಾಯಿತು. 12 ತಿಂಗಳ ಕಾಲ ಹೆಚ್ಚಿನ ಹಣಕಾಸು ವೆಚ್ಚವಿಲ್ಲದೆ ಜಾಹೀರಾತುಗಳಿಂದ ಪತ್ರಿಕೆ ತರಲು ಸಾಧ್ಯವಾಯಿತು ಎಂದು ಹೇಳಿದರು.

ಹಿರಿಯ ಕನ್ನಡತಿ, ಡಾ. ಅಹಲ್ಯಾ ಚಿಂತಾಮಣಿಯವರು ಮಾತನಾಡಿ ಅಭಿಮತ ಹುಟ್ಟುವುದಕ್ಕೂ ಮೊದಲೇ ತಾವು ಕರ್ನಾಟಕ ಸಂಘವನ್ನು ನೋಡುತ್ತ ಬಂದಿದ್ದು, ಅಂದಿಗೂ ಇಂದಿಗೂ ಸಾಕಷ್ಟು ಬದಲಾವಣೆಗಳಾಗಿವೆ ಎಂದರು. ಅಭಿಮತವನ್ನು ಆರಂಭದಲ್ಲಿ ಮುನ್ನಡೆಸಿದ ಡಾ. ವೆಂಕಟಾಚಲ ಹೆಗಡೆಯವರಿಗೆ ಅಭಿನಂದನೆ ಹೇಳಿದ ಅವರು ಅಂದು ಅಭಿಮತಕ್ಕಾಗಿ ದುಡಿದ ಲಕ್ಷ್ಮೀನಾರಾಯಣ ರಾವ್, ರಂಗಸ್ವಾಮಯ್ಯ ಅವರನ್ನು ಸ್ಮರಿಸಿಕೊಂಡರು.

ಅಭಿಮತದ ಸಂಪಾದಕ ಮಂಡಳಿಯಲ್ಲಿ ಸೇವೆ ಸಲ್ಲಿಸಿದ್ದ ಕವಯಿತ್ರಿ–ಸಾಹಿತಿ ಶ್ರೀಮತಿ ರೇಣುಕಾ ನಿಡಗುಂದಿಯವರು ತಮ್ಮ ಮತ್ತು ಅಭಿಮತದ ಒಡನಾಟವನ್ನು ನೆನೆದು, ತಾವು ಮತ್ತು ಶ್ರೀಮತಿ ಉಷಾ ಭರತಾದ್ರಿಯವರು ಅಭಿಮತಕ್ಕಾಗಿ ಯಾವರೀತಿ ದುಡಿದೆವು ಎಂಬುದನ್ನು ವಿವರಿಸುತ್ತ, ಅಭಿಮತಕ್ಕಾಗಿ ಹೇಳದಷ್ಟು ಸುಳ್ಳನ್ನು ತಾವು ಬೇರೆಲ್ಲೂ ಹೇಳಿಲ್ಲ, ಆಫೀಸಿಗೆ ಚಕ್ಕರ್ ಹೊಡೆದು ಅಭಿಮತದ ಸಂಚಿಕೆಯನ್ನು ಇನ್ನಷ್ಟು ಸುಂದರಗೊಳಿಸಲು ಶ್ರಮವಹಿಸುತ್ತಿದ್ದೆವು ಎಂದು ಹಾಸ್ಯಮಯವಾಗಿ ವಿವರಿಸಿದರು. ಅಡುಗೆ ಮನೆಯಲ್ಲಿ ಕೆಲಸ ಮಾಡುವಾಗಲೂ ಅಭಿಮತದ ಸಂಚಿಕೆ ಈ ಬಾರಿ ಹೇಗೆ ಬರಬೇಕು ಎಂಬುದನ್ನೇ ಪರಸ್ಪರ ಚರ್ಚಿಸುತ್ತಿದ್ದೆವು ಎಂದ ಅವರು ತಮ್ಮ ಅವಧಿಯಲ್ಲಿ ಅಭಿಮತದ ಗುಣಮಟ್ಟವನ್ನು ಹೆಚ್ಚಿಸಲು ಕಾರಣರಾದ ಮಂಜುನಾಥ ಕಾಮತ್, ದಿನೇಶ್ ಶೆಣೈ ಹಾಗೂ ಸಂಘದ ವ್ಯವಸ್ಥಾಪಕರಾದ ಶೇಖರ್ ಕುಂದರ್ ಅವರನ್ನು ಸದಾ ಕೃತಜ್ಞತೆಯಿಂದ ಸ್ಮರಿಸುವುದಾಗಿ ಹೇಳಿದರು.

ಚಂದ್ರಶೇಖರ್ ಎನ್.ಪಿ. ಅವರು ಮಾತನಾಡಿ ಪತ್ರಿಕೆಯೊಂದರ ಸಂಪಾದಕರಿಗೆ ಮಹತ್ತರವಾದ ಜವಾಬ್ದಾರಿ ಇರುತ್ತದೆ, ಅವರು ನಿಷ್ಠುರ ನಿಲುವು ತಳೆಯಬೇಕಾಗುತ್ತದೆ ಎಂದರು. ಗಾಂಧೀ ಜಯಂತಿಯಂದೇ ಜನಿಸಿದ ಅಭಿಮತದಲ್ಲಿ ಗಾಂಧಿ ತತ್ವಗಳಾದ ಸತ್ಯ ಮತ್ತು ಅಹಿಂಸೆಗಳನ್ನು ಎತ್ತಿಹಿಡಿಯುವ ಕೆಲಸ ಮುಂದುವರಿಯಬೇಕಿದೆ ಎಂದು ಆಶಿಸಿದರು. ಹಾಲಿ ಸಂಪಾದಕ ಮಂಡಳಿಯು 'ಚಿಣ್ಣರಲೋಕ' ಎಂಬ ಅಂಕಣವನ್ನು ಆರಂಭಿಸಿರುವುದು ಹೊಸ ಪ್ರಯೋಗಕ್ಕೆ ಸಾಕ್ಷಿಯಾಗುತ್ತದೆ ಎಂದರು.

ಸಂಪಾದಕ ಮಂಡಳಿಯ ಸದಸ್ಯ ಸಂತೋಷ್ ಉಪಾಧ್ಯಾಯರು ಮಾತನಾಡಿ ಅಭಿಮತದ ಮೊದಲ ಸಂಚಿಕೆಯಲ್ಲಿ ಅಂದಿನ ಅಧ್ಯಕ್ಷ ಎನ್.

ಪಿ. ಭಟ್ಟರು "ಪರ್ವತವನ್ನು ಏರುತ್ತ ಮೇಲೆ ಹೋದಂತೆ ಪ್ರಾಣವಾಯುವಿನ ಅಗತ್ಯ ಹೇಗೆ ಇರುತ್ತದೋ, ಹಾಗೆ ಹೊರನಾಡ ಕನ್ನಡಿಗರಿಗೆ ಕನ್ನಡವೆಂಬುದು ಪ್ರಾಣವಾಯುವಿನಂತೆ ಕೆಲಸ ಮಾಡುತ್ತದೆ" ಎಂದು ಹೇಳಿದ್ದರು ಅಂಥ ಪ್ರಾಣವನ್ನು ತುಂಬುವ ಕೆಲಸವನ್ನು ಅಭಿಮತ ಕಳೆದ ಮೂವತ್ತು ವರ್ಷಗಳಲ್ಲಿ ಮಾಡಿದೆ ಎಂದು ಹೇಳಿದರು. ಕರ್ನಾಟಕ ಸಂಘದ ಇತಿಹಾಸವನ್ನು ಸಮಗ್ರವಾಗಿ ಹಿಡಿದಿಡುವಲ್ಲಿ ಮುಖವಾಣಿ ಯಶಸ್ವಿಯಾಗಿದೆ ಎಂದು ಹೊಗಳಿದ ಉಪಾಧ್ಯಾಯರು ಸಂಘದ ಚಟುವಟಿಕೆಗಳು, ಆಗುಹೋಗುಗಳು ಯಾವ ಗುಣಮಟ್ಟದಲ್ಲಿ ಇದ್ದವು, ಈಗ ಹೇಗಿವೆ ಎಂಬುದನ್ನು ಇಡೀ ಜಗತ್ತಿಗೆ ಪರಿಚಯಿಸುವ ಕನ್ನಡಿಯೇ ಅಭಿಮತ ಎಂದರು. ಅಭಿಮತದ ಅವಲೋಕನ ಎಂದರೆ ಕರ್ನಾಟಕ ಸಂಘದ ಸಿಂಹಾವಲೋಕನ, ಹೀಗಾಗಿ ಆಗಾಗ ಅಭಿಮತವನ್ನು ಅವಲೋಕಿಸುವ ಕೆಲಸವಾಗಬೇಕಿದೆ. ಅಭಿಮತವನ್ನು ಅಧ್ಯಯನ ಮಾಡಿದಾಗಲೇ ನಮಗೆ ಯಾವ ವರ್ಷ ಏನಾಗಿತ್ತು ಎಂಬುದು ತಿಳಿದುಬರುತ್ತದೆ ಎಂದರು. ಅವರು ಡಾ. ಪುರುಷೋತ್ತಮ ಬಿಳಿಮಲೆಯವರು ೨೦೦೫ರ ಜುಲೈನಲ್ಲಿ ಬರೆದ ಲೇಖನವನ್ನು ಉಲ್ಲೇಖಿಸಿದರು. ಸಂಘದ ಅಧಿಕಾರ ತಮ್ಮ ಶಾಶ್ವತ ಹಕ್ಕು ಎಂದು ನಂಬಿಕೊಂಡ ಎಲ್ಲರಿಗೂ ಆ ಲೇಖನ ಕರೆಗಂಟೆಯಾಗಿ ಕೆಲಸ ಮಾಡಬಲ್ಲದು ಎಂದು ಹೇಳಿದರು. ದೇಶದ ರಾಜಧಾನಿಯಲ್ಲಿದ್ದುಕೊಂಡು ಅತ್ಯುತ್ತಮ ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಳ್ಳುವಲ್ಲಿ ಅಭಿಮತ ಸಫಲವಾಗಿದೆ. ದಿವಂಗತ ಜಿ.ಎ ಬಿರಾದಾರ್, ಬಿ. ರಮೇಶ್ ಭಟ್, ಸುರೇಂದ್ರ ಹೆಗಡೆ, ಪ್ರೊ. ಸತ್ಯನಾಥರಂಥ ವ್ಯಕ್ತಿಗಳಿಂದಾಗಿ ಅಭಿಮತಕ್ಕೆ ಹೆಚ್ಚು ತೂಕ ಬಂದಿತ್ತು, ಅಂಥವರಿಗೆ ಕರ್ನಾಟಕ ಸಂಘ ಸ್ನೇಹಪೂರ್ಣ ವಾತಾವರಣವನ್ನು ನಿರ್ಮಿಸಿಕೊಡುವಲ್ಲಿ ಯಶಸ್ವಿಯಾಗಿತ್ತು ಎಂದು ಅಭಿಪ್ರಾಯಪಟ್ಟರು. ಸಮರ್ಥ ಸಂಪಾದಕರಿದ್ದಾಗ ಪತ್ರಿಕೆಯೊಂದಕ್ಕೆ ಚುಂಬಕ ಶಕ್ತಿ ಬರುತ್ತದೆ, ಗುರು ಬಾಳಿಗ, ವೀರೇಶ್ ಹೊಗೆಸೊಪ್ಪಿನವರ್, ಪ್ರಕಾಶ್ ಉಳಿಪಾಡಿಯಂಥ ಕಲಾವಿದರು ತಾವಾಗಿಯೇ ಬಂದು ಕನ್ನಡ ಕೈಂಕರ್ಯದಲ್ಲಿ ತೊಡಗಿಸಿಕೊಂಡರು. ಇದರಿಂದಾಗಿಯೇ ಓದುಗರನ್ನು ಹಿಡಿದಿಡುವಲ್ಲಿ ಅಭಿಮತ ಸಫಲತೆ ಕಂಡಿದೆ ಎಂದು ಹೇಳಿದರು.

ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರು ಮಾತನಾಡಿ ಅಭಿಮತವನ್ನು ಕಟ್ಟಿ ಬೆಳೆಸುವಲ್ಲಿ ತಾವು ಪಟ್ಟ ಶ್ರಮಗಳನ್ನು ನೆನೆದು, ಆಗ ಮೊಳೆ ಜೋಡಿಸಿ ಮುದ್ರಿಸಬೇಕಾದ ಅನಿವಾರ್ಯತೆ ನಮಗಿತ್ತು. ಅಧ್ಯಕ್ಷ ಎನ್.ಪಿ. ಭಟ್ಟರು ಹಾಗೂ ಅಂದಿನ ಸಂಪಾದಕ ಮಂಡಳಿಯ ಸಹಕಾರದಿಂದಾಗಿ ಕೆಲಸ ಸಲೀಸಾಗಿ ನಡೆಯುತ್ತಿತ್ತು. ಎಲ್ಲಕ್ಕೂ ಮುಖ್ಯವಾಗಿ ಆ ದಿನಗಳಲ್ಲಿ ಕನ್ನಡಕ್ಕಾಗಿ ದುಡಿಯುವ ಪ್ರಾಮಾಣಿಕ ಪ್ರೀತಿ ಇದ್ದವರ ಸಂಖ್ಯೆ ಇತ್ತು. ಅಭಿಮತದ ಯಶಸ್ಸಿಗೆ ಇದೇ ಕಾರಣ ಎಂದರು. ಪ್ರೊ. ಸತ್ಯನಾಥ್, ಚೆನ್ನು ಎಸ್. ಮಠದ್, ಶ್ರೀಮತಿ ರಮಾ, ಭೀಮ್ ರಾವ್ ಮುರುಗೋಡ್‌ರಂಥವರ ಸಹಕಾರದಿಂದಾಗಿ ಎಂಟೇ ಪುಟಗಳ ನಮ್ಮ ಅಭಿಮತ ಕರ್ನಾಟಕದ ಖ್ಯಾತ ವ್ಯಕ್ತಿಗಳನ್ನು ಓದುಗರನ್ನಾಗಿ ಪಡೆಯಿತು. ಸತತ ಹದಿನಾಲ್ಕು ವರ್ಷಗಳ ಕಾಲ ತಾವು ಸಂಪಾದಕರಾಗಿ ಕಟ್ಟಿ ಬೆಳೆಸಿದ ಅಭಿಮತ ಇದೀಗ ಈ ಮಟ್ಟಕ್ಕೆ ಬೆಳೆದು ನಿಂತಿರುವುದನ್ನು ನೋಡಿದರೆ ಹೆಮ್ಮೆಯಾಗುತ್ತದೆ. ಇದಕ್ಕೆ ಕಾರಣರಾದ ಎಲ್ಲರಿಗೂ ತಾವು ಕೃತಜ್ಞರಾಗಿರುವುದಾಗಿ ಹೇಳಿದರು. ಅಭಿಮತ ಸಂಘದ ಶಾಶ್ವತ ದಾಖಲೆಯಾಗಿದೆ, ಇದರಲ್ಲಿ ಬರುವ ಎಲ್ಲಾ ಬರಹಗಳೂ ಗುಣಮಟ್ಟವನ್ನು ಕಾಯ್ದುಕೊಂಡು ಮುಂದಿನವರಿಗೆ ಅಧ್ಯಯನ ಯೋಗ್ಯ ಸಂಗ್ರಹವಾಗಿ ರೂಪುಗೊಳ್ಳಬೇಕು ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಸಾಹಿತಿ ಡಾ. ಪುರುಷೋತ್ತಮ ಬಿಳಿಮಲೆ, ಮಾಜಿ ಕಾರ್ಯದರ್ಶಿ ಸರವು ಕೃಷ್ಣ ಭಟ್, ಕವಿ ರಮೇಶ್ ಅರೋಲಿ, ಶ್ರೀಮತಿ ಆಶಾಲತಾ ಮೊದಲಾದವರು ಉಪಸ್ಥಿತರಿದ್ದು ಮಾತನಾಡಿದರು.

**ಸಂತೋಷ್ ಉಪಾಧ್ಯಾಯ**

# ಅಭಿಮತ ದೆಹಲಿ ಕನ್ನಡಿಗರ ಹೆಮ್ಮೆಯ ಪ್ರತೀಕ



ನಾವು ನೀವೆಲ್ಲಾ ನೋಡ ನೋಡುತ್ತಲೇ ಅಭಿಮತಕ್ಕೆ ಇದೀಗ ೩೦ ರ ಪರಿಪಕ್ವ ಪ್ರಾಯ. ನಿಜಕ್ಕೂ ಸಂತೋಷ ಹಾಗೂ ಅಭಿಮಾನದ ಸಂಗತಿ.

ಮೊದಲನೆಯದಾಗಿ ಮನಃಪೂರ್ವಕ ಅಭಿನಂದನೆಗಳು. ಹತ್ತು ಹಲವು ಮಹನೀಯರ ನಿರಂತರ ಪರಿಶ್ರಮದ ಫಲವೇ ಈ ನಮ್ಮ ಹೆಮ್ಮೆಯ ಪತ್ರಿಕೆ. ಪುಟ್ಟ ಪುಟ್ಟ ಹೆಜ್ಜೆಗಳನ್ನಿಡುತ್ತಾ ಹಲವಾರು ಸಮಸ್ಯೆಗಳ ನಡುವೆ ಅಭಿಮತ ಸಾಗಿ ಬಂದ ದಾರಿ ಈಗಾಗಲೇ ತಮಗೆಲ್ಲಾ ತಿಳಿದಿದೆ. ದೆಹಲಿ ಕರ್ನಾಟಕ ಸಂಘದ ಪ್ರತಿಬಿಂಬವಾಗಿ ಹೊರಹೊಮ್ಮಿದ ಮುಖವಾಣಿ ಇಷ್ಟು ದೂರ ಸಾಗಿ ಬರಬಹುದೆಂಬ ಕಲ್ಪನೆ ಬಹುಶಃ ಪ್ರಾರಂಭದಲ್ಲಿ ಇರಲಿಕ್ಕಿಲ್ಲ.

ಸಾಮಾನ್ಯವಾಗಿ ಸಂಘ ಸಂಸ್ಥೆಗಳ ಪತ್ರಿಕೆಗಳು ಅದೆಷ್ಟೋ ಬಾರಿ ಇದ್ದಕ್ಕಿದ್ದಂತೆ ನಿಂತು ಹೋಗಿರುವ ನಿದರ್ಶನಗಳು ಹಲವಾರು.. ಕರ್ನಾಟಕದ ಯಾವ ಪತ್ರಿಕೆ ಗಳಿಗೂ ಕಡಿಮೆ ಇಲ್ಲದಂತೆ ಈ ನಮ್ಮ ಪತ್ರಿಕೆ ಇಂದಿಗೂ ನವನವೀನವಾಗಿ ಕಂಗೊಳಿಸುತ್ತಿರುವುದು ನಿಜಕ್ಕೂ ದೆಹಲಿ ಕನ್ನಡಿಗರ ಹೆಮ್ಮೆಯ ಪ್ರತೀಕ ಹಾಗೂ ದೆಹಲಿ ಕರ್ನಾಟಕ ಸಂಘದ ಅಭಿಮಾನದ ದ್ಯೋತಕ.

೨೦೦೪ ರಿಂದ ಸುಮಾರು ಒಂದು ದಶಕದ ಅಭಿಮತದ ನನ್ನ ಒಡನಾಟ ಎಂದೆಂದಿಗೂ ಅವಿಸ್ಮರಣೀಯ. ಹೊರನಾಡ ಕನ್ನಡಿಗಳಾಗಿ ಅಳಿಲು ಸೇವೆ ಸಲ್ಲಿಸಿದ್ದು ನನ್ನ ಸುಯೋಗ. ಅದಕ್ಕಾಗಿ ನಾನೆಂದೂ ಆಭಾರಿಯಾಗಿದ್ದೇನೆ. ನನ್ನೊಡನೆ ಸಹಕರಿಸಿದ ಪ್ರತಿಯೊಬ್ಬರಿಗೂ ನನ್ನ ಹೃದಯಪೂರ್ವಕ ಧನ್ಯವಾದಗಳು. ಸಂಘ ಸಂಸ್ಥೆಗಳ ಮುಖವಾಣಿ ಸ್ವಪ್ರತಿಷ್ಠೆಯ ಲಾಭಕ್ಕಾಗಿ ಅಥವಾ ರಾಜಕೀಯವಾಗಿ ದುರುಪಯೋಗವಾಗುವ ಸಂಭವ ಹೆಚ್ಚು. ಆದರೆ ಆ ಅಪಾಯಕ್ಕೆ ಎಂದೂ ಸಿಲುಕದೇ ಸ್ವತಂತ್ರವಾಗಿ ಸ್ವಾಯತ್ತತೆಯನ್ನು ಕಾಪಾಡಿಕೊಂಡು ಈ ನಮ್ಮ ನೆಚ್ಚಿನ ಅಭಿಮತ ಬೆಳೆದು ಬಂದಿರುವುದು ನಿಜಕ್ಕೂ ಪ್ರಶಂಸನೀಯ. ತನ್ನತನವನ್ನು ಉಳಿಸಿಕೊಂಡು ಪ್ರವರ್ಧಮಾನಕ್ಕೆ ಏರುತ್ತಿರುವ ಅಭಿಮತ ಹೀಗೇ ನಿರಾಯಾಸವಾಗಿ. ನಿರಂತರವಾಗಿ ಸಾಗುತ್ತಿರಲಿ ಎಂದು ಆಶಿಸುತ್ತೇನೆ. ಸುವರ್ಣ ಸಂಭ್ರಮ ಹಾಗೂ ಶತಮಾನದ ಸಂಭ್ರಮವನ್ನು ಆಚರಿಸಲಿ ಎಂದು ತುಂಬು ಹೃದಯದಿಂದ ಹಾರೈಸುತ್ತೇನೆ. ಪತ್ರಿಕೆಯ ಮೊದಲ ಸಂಪಾದಕರಾದ ವೆಂಕಟಾಚಲ ಹೆಗಡೆಯವರ ಅಧ್ಯಕ್ಷತೆಯಲ್ಲಿ ೩೦ ರ ಸಂಭ್ರಮವನ್ನು ಆಚರಿಸುತ್ತಿರುವುದು ನಿಜಕ್ಕೂ ಸುಯೋಗವೇ ಸರಿ.

ಅಭಿಮತ ಪತ್ರಿಕೆಗಾಗಿ ತಮ್ಮ ಅಮೂಲ್ಯ ಸಮಯವನ್ನು ನೀಡಿ ಕೈ ಹಿಡಿದು ನಡೆಸಿದ ಹಾಗೂ ಇದೀಗ ನಡೆಸುತ್ತಿರುವ ಪ್ರತಿಯೊಬ್ಬರಿಗೂ ನನ್ನ ಹೃತ್ಪೂರ್ವಕ ವಂದನೆ ಅಭಿನಂದನೆ.

**ಉಷಾ ಭರತಾದ್ರಿ**

# ಮಹನೀಯರ ಕೊಡುಗೆಗಳಿಂದ ಬೆಳೆದು ಬಂದ ಪತ್ರಿಕೆ



ದೆಹಲಿ ಕರ್ನಾಟಕ ಸಂಘದ ಮುಖಪತ್ರಿಕೆ ಅಭಿಮತ ಮೂರು ದಶಕಗಳಿಂದ ಪ್ರಕಟಗೊಳ್ಳುತ್ತಿದೆ. ಇದು ಹೊರನಾಡಿನಲ್ಲಿ ನಡೆಯುತ್ತಿರುವ ಕನ್ನಡದ ಕೆಲಸಗಳ ಕುರಿತು ಒಂದು ಚಿತ್ರಣವನ್ನು ನೀಡುತ್ತದೆ. ನಾವು ನಮ್ಮ ನಾಡಿನಿಂದ ಹೊರಗೆ ಬಂದಾಗ ನಮಗೆ ನಮ್ಮ ಮೂಲ ಸಂಸ್ಕೃತಿ ಮತ್ತು ಭಾಷೆಯ ಮೋಹ ಇನ್ನಷ್ಟು ಹೆಚ್ಚುತ್ತಿದೆ ಎನ್ನುವುದಕ್ಕೆ ದೆಹಲಿ ಕರ್ನಾಟಕ ಸಂಘದಲ್ಲಿ ನಡೆಯುತ್ತಿರುವ ಕನ್ನಡದ ಕೆಲಸಗಳೇ ಸಾಕ್ಷಿ. ಅಭಿಮತವನ್ನು ನಡೆಸಿ ಬೆಳೆಸುವಲ್ಲಿ ದೆಹಲಿಯ ಮಾತ್ರವಲ್ಲದೇ ನಾಡಿನ ಮತ್ತು ದೇಶ, ವಿದೇಶದ ಅನೇಕ ಮಹನೀಯರ ಕೊಡುಗೆ ಮತ್ತು ಬೆಂಬಲ ದೊರಕಿದೆ. ಅಭಿಮತದ ಓದುಗ ಮಾತ್ರನಲ್ಲದೇ ಅದರ ಬರಹಗಾರ ಮತ್ತು ಸಂಪಾದಕ ಮಂಡಳಿಯಲ್ಲಿ ಕೆಲಸ ಮಾಡುವ ಸುಯೋಗವನ್ನು ಹೊಂದಿದ ನಾನು ಧನ್ಯನು. ಈ ಸಂದರ್ಭದಲ್ಲಿ ಅಭಿಮತದ ಎಲ್ಲ ಓದುಗರಿಗೆ ಶುಭಾಶಯಗಳು ಮತ್ತು ಅಭಿಮತದ ಸಂಪಾದಕ ಮಂಡಳಿ ಹಾಗೂ ಸಂಘದ ಕಾರ್ಯಕಾರಿ ಸಮಿತಿಗೆ ಅಭಿನಂದನೆಗಳು

**ಬಾಲಕೃಷ್ಣ ನಾಯ್ಕ್ ಡಿ.**

# 'ಗಾಂಧಿಯನ್ನು ಭಿನ್ನವಾಗಿ ಕಂಡ ಕನ್ನಡ ಸಾಹಿತಿಗಳು'

## -ಪುರುಷೋತ್ತಮ ಬಿಳಿಮಲೆ




ಇಪ್ಪತ್ತನೇ ಶತಮಾನದ ಆರಂಭದಲ್ಲಿ ದಕ್ಷಿಣ ಆಫ್ರಿಕಾದಿಂದ ಮರಳಿ ಭಾರತಕ್ಕೆ ಬರುವವರೆಗೂ ಗಾಂಧಿ ಚಿಂತನೆಗಳು ಮತ್ತು ವಿಚಾರಧಾರೆಗಳು ಭಾರತೀಯರಿಗೆ ತಿಳಿದಿರಲಿಲ್ಲ. ಸತ್ಯಾಗ್ರಹ, ಅಹಿಂಸಾತ್ಮಕ ಹೋರಾಟಗಳಿಂದ ಬ್ರಿಟಿಷರು ಭಾರತ ಬಿಟ್ಟು ತೊಲಗಲು ಕಾರಣರಾದ ಗಾಂಧಿಯವರ ನಿಲುವು ಮತ್ತು ವಿಚಾರಗಳು ಇಡೀ ಭಾರತವನ್ನು ಆವರಿಸಿತು. ಭಾರತದ ಬೇರೆ ಭಾಗಗಳಲ್ಲಿ ಗಾಂಧಿ ವಿಚಾರಗಳಿಗೆ ಕೆಲವು ಬಗೆಯ ಪ್ರತಿರೋಧಗಳು ಕಂಡು ಬಂದರೂ ಕನ್ನಡಿಗರು ಗಾಂಧಿ ವಿಚಾರಗಳನ್ನು ಹೆಚ್ಚು ಆಸಕ್ತಿ ಮತ್ತು ಪ್ರೀತಿಯಿಂದ ಒಪ್ಪಿಕೊಂಡು ಭಿನ್ನ ಬಗೆಯ ಸಾಹಿತ್ಯವನ್ನು ರಚಿಸಿದರು ಎಂದು ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥ, ಸಾಹಿತಿ ಡಾ. ಪುರುಷೋತ್ತಮ ಬಿಳಿಮಲೆ ಅವರು ಅಭಿಪ್ರಾಯಪಟ್ಟರು.

ಅವರು ದಿನಾಂಕ 02.10.2019ರಂದು ನಡೆದ 'ಕನ್ನಡ ಸಾಹಿತ್ಯದಲ್ಲಿ ಮಹಾತ್ಮ ಗಾಂಧಿ' ವಿಚಾರಗೋಷ್ಠಿಯಲ್ಲಿ ವಿಷಯ ಮಂಡಿಸಿ ಮಾತನಾಡುತ್ತಿದ್ದರು.

ಗಾಂಧಿ ವಿಚಾರಧಾರೆಗಳಲ್ಲಿ ಇರುವ ಮಾನವೀಯ ಅಂಶಗಳು ಕನ್ನಡದ ಕವಿಗಳಿಗೆ ಪ್ರೇರಣೆ ನೀಡಿವೆ ಎಂದು ಹೇಳಿದ ಡಾ. ಬಿಳಿಮಲೆ ಅವರು ಕನ್ನಡ ಕಾವ್ಯದಲ್ಲಿ ಗಾಂಧಿ ಕಾಣಿಸಿಕೊಂಡ ಬಗೆಯನ್ನು ಹಲವಾರು ಕವಿತೆಗಳ ಮೂಲಕ ಪ್ರಸ್ತುತಪಡಿಸಿದರು.



ಡಾ. ರಮೇಶ್ ಅರೋಲಿ

ಕವಿ ಡಾ. ರಮೇಶ್ ಅರೋಲಿ ಅವರು ಪ್ರಬಂಧ ಮಂಡಿಸಿ ಗಾಂಧಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಗಳನ್ನು ತುಲಾನಾತ್ಮಕವಾಗಿ ಚರ್ಚಿಸಿದರು. ಅಂಬೇಡ್ಕರ್‌ವಾದ ಕರ್ನಾಟಕಕ್ಕೆ ಪರಿಚಯಗೊಂಡ ಬಳಿಕ ಗಾಂಧಿ ತತ್ವ ಚಿಂತನೆಗಳ ಮರುಪರಿಶೀಲನೆ ಸಾಧ್ಯವಾಯಿತು. ಇದರಿಂದಾಗಿಯೇ ಕನ್ನಡ ಸಾಹಿತ್ಯ ಮತ್ತು ರಂಗಭೂಮಿಯಲ್ಲಿ ಭಿನ್ನ ಪ್ರಯೋಗಗಳು ಮೂಡಿ ಬಂದವು ಎಂದು ಡಾ. ಅರೋಲಿ ಅನಿಸಿಕೆ ವ್ಯಕ್ತಪಡಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು.

**ಡಾ. ಅವನೀಂದ್ರನಾಥ್ ರಾವ್**

# ಗಾಂಧೀಜಿಯನ್ನು ಗೌರವಿಸುವುದೆಂದರೆ ದೇಶವನ್ನು ಗೌರವಿಸಿದಂತೆ

ಭಾರತ ಒಂದು ವಿಚಿತ್ರ ಪರಿಸ್ಥಿತಿಗೆ ಬಂದು ನಿಂತಿದೆ. ಗಾಂಧೀ ಹಂತಕರನ್ನು ಹಲವರು ಆರಾಧಿಸಲು ಸುರುಮಾಡಿದ್ದಾರೆ. ಗೋಡ್ಸೆಗೆ ಒಂದು ದೇವಸ್ಥಾನವನ್ನೂ ಕಟ್ಟಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಗಾಂಧಿಯನ್ನು ಅಪಹಾಸ್ಯ ಮಾಡುವ ಕೃತಕ ಚಿತ್ರಗಳು ಬಹಳ ಜನಪ್ರಿಯವಾಗಿವೆ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿ ಇಷ್ಟು ವರ್ಷಗಳಾದ ಆನಂತರ ಇದ್ದಕ್ಕಿದ್ದಂತೆ ಇವೆಲ್ಲ ಯಾಕೆ ಸುರು ಆದುವು ಅಂತ ಅರ್ಥಮಾಡಿಕೊಳ್ಳುವುದು ಸುಲಭವಲ್ಲ. ಯಾವುದೋ ಒಂದು ಬಗೆಯ ಉನ್ಮಾದಕ್ಕೆ ಒಳಪಟ್ಟವರು, ಗಾಂಧಿಯವರು ಬರೆದುದನ್ನು ಓದುವುದೂ ಇಲ್ಲ, ಚಾರಿತ್ರಿಕವಾಗಿ ಗಾಂಧೀಜಿ ನಿರ್ವಹಿಸಿದ ಪಾತ್ರವನ್ನೂ ಅರ್ಥಮಾಡಿಕೊಳ್ಳುವುದೂ ಇಲ್ಲ. ಆಶ್ಚರ್ಯವೆಂದರೆ, ಗಾಂಧಿಯ ಮೇಲಾಗುತ್ತಿರುವ ಬಗೆ ಬಗೆಯ ಹಲ್ಲೆಗಳನ್ನು ಅಧಿಕಾರದಲ್ಲಿರುವವರು ಗಂಭೀರವಾಗಿ ಖಂಡಿಸುವುದೇ ಇಲ್ಲ. ಹೆಚ್ಚಿನ ಮಾಧ್ಯಮಗಳಿಗೂ ಇದು ಚರ್ಚೆಯ ವಿಷಯವಾಗುತ್ತಿಲ್ಲ. ಇವೆಲ್ಲವನ್ನೂ ಗಮನಿಸಿದಾಗ ಇಂದಿನ ಭಾರತವು ರಾಷ್ಟ್ರಪಿತನ ಬಗ್ಗೆ ಗೌರವ ಭಾವ ಹೊಂದಿಲ್ಲ ಎಂಬ ಅಂಶ ಸ್ಪಷ್ಟವಾಗುತ್ತದೆ. ಗಾಂಧಿಯನ್ನು ತಿರಸ್ಕರಿಸುತ್ತಿರುವ ಭಾರತ ವಿಶ್ವದಾದ್ಯಂತ ನಗೆಪಾಟಲಿಗೆ ಗುರಿಯಾಗುತ್ತಲಿದೆ.

ಗಾಂಧಿಯವರು ಕೆಲಸ ಮಾಡುತ್ತಿದ್ದಾಗಣ ಭಾರತವಾದರೂ ಹೇಗಿತ್ತು ಎಂದು ಕ್ಷಣ ಯಾರಾದರೂ ಯೋಚಿಸಬೇಕು. ಬ್ರಿಟಿಷರ ಆಳ್ವಿಕೆಯಿಂದ ಕುಗ್ಗಿದ ಭಾರತ, ಕೋಟಿ ಕೋಟಿ ಜನರು, ಸಾವಿರಾರು ಭಾಷೆಗಳು, ಅಸಂಖ್ಯ ಸಮುದಾಯಗಳು, ನೂರಾರು ಮತ ಧರ್ಮಗಳು, ಲಕ್ಷಾಂತರ ಆಚರಣೆಗಳು, ಲೆಕ್ಕವಿಲ್ಲದ ದೇವರುಗಳು, ವೈವಿಧ್ಯಮಯ ಭೌಗೋಳಿಕತೆ. ಇಂಥ ದೇಶದ ಬಡವರನ್ನು ಒಂದುಗೂಡಿಸಿ, ಸೂರ್ಯ ಮುಳುಗದ ದೇಶವೆಂದು ಪ್ರಖ್ಯಾತಿ ಪಡೆದಿದ್ದ ಇಂಗ್ಲಂಡಿನ ವಿರುದ್ಧ ನಿಲ್ಲಿಸಿ ಗಾಂಧಿ ಗೆದ್ದರು. ದೇಶದ ಪಾರಂಪರಿಕ ರಾಜ ಪ್ರಭುತ್ವ, ಧಾರ್ಮಿಕತೆ, ಜಾತೀಯತೆ ಮೊದಲಾದ ಹಂಗುಗಳಿಂದ ನಮ್ಮನ್ನು ಬಿಡಿಸಿ, ನಮಗೆ ದೇಶದ ಪೌರತ್ವವನ್ನು ಒದಗಿಸಿಕೊಟ್ಟವರಲ್ಲಿ ಗಾಂಧಿ ಪ್ರಮುಖರು. ಅವರು ಕೋಟ್ಯಂತರ ಭಾರತೀಯರ ಬದುಕಿಗೊಂದು ಭರವಸೆಯನ್ನು ತಂದುಕೊಟ್ಟರು. ಸಮಾನತೆ ಮತ್ತು ಸಾಮಾಜಿಕ ನ್ಯಾಯಗಳು ಗಗನ ಕುಸುಮಗಳಾಗಿದ್ದ ಭಾರತದಲ್ಲಿ ಎಲ್ಲರ ಘನತೆಯನ್ನು ಸಮಾನವಾಗಿ ಎತ್ತಿ ಹಿಡಿಯಲು ಅವರು ಮಾಡಿದ ಕೆಲಸಗಳು ಅಸಾಮಾನ್ಯ. ಆದುದರಿಂದಲೇ ಅವರು ಮಹಾತ್ಮ ಮತ್ತು ರಾಷ್ಟ್ರಪಿತ ಎಂಬ ಗೌರವಕ್ಕೆ ಸಹಜವಾಗಿ ಪಾತ್ರರಾಗಿದ್ದರು. ಈ ಬಿರುದುಗಳನ್ನು ಬಿಟ್ಟರೆ, ದೇಶ ಅವರಿಗೇನು ಕೊಟ್ಟಿತು? ಇವತ್ತು ಗಾಂಧೀಜಿಯನ್ನು ಗೌರವಿಸುವುದೆಂದರೆ ದೇಶವನ್ನು ಗೌರವಿಸಿದಂತೆ, ಅವರನ್ನು ಅವಮಾನಿಸುವುದೆಂದರೆ, ದೇಶವನ್ನು ವಿರೋಧಿಸಿದಂತೆ.

ಇವತ್ತಿನ ದಯನೀಯ ಸಂದರ್ಭದಲ್ಲಿ ಬದುಕುತ್ತಿರುವ ನಾವು ಮೊದಲು ಮಾಡಬೇಕಾದ ಕೆಲಸವೆಂದರೆ ಗಾಂಧೀಜಿಯ ಬಗ್ಗೆ ಹೆಚ್ಚು ಹೆಚ್ಚು ತಿಳಿದುಕೊಳ್ಳುವುದು. ಬದಲಾದ ರಾಜಕೀಯ ಸಂದರ್ಭದಲ್ಲಿ ಅವರು ನಮಗೆ ಎಷ್ಟು ಪ್ರಸ್ತುತರಾಗಿದ್ದಾರೆ ಎಂಬುದರ ಕುರಿತು ಚರ್ಚಿಸುವುದು. ಗಾಂಧೀಜಿಯ ಪ್ರಭಾವ ದೇಶದ ಎಲ್ಲೆಡೆ ಹೇಗೆ ಆಗಿದೆ ಎಂಬುದನ್ನು ಗುರುತಿಸುವುದು.

ನವೋದಯ ಕವಿಗಳಾದ ಎಂ. ಗೋವಿಂದ ಪೈ, ಕಡೆಂಗೋಡ್ಲು ಶಂಕರ ಭಟ್ಟ, ಡಿ.ವಿ.ಜಿ., ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ದ.ರಾ. ಬೇಂದ್ರೆ, ಪು.ತಿ.ನ., ಸಾಲಿ ರಾಮಚಂದ್ರರಾವ್, ಬೆಟಗೇರಿ ಕೃಷ್ಣಶರ್ಮ, ಡಿ.ಎಸ್. ಕರ್ಕಿ, ತೀ.ನಂ.ಶ್ರೀ, ವಿ. ಸೀತಾರಾಮಯ್ಯ, ಎಸ್.ವಿ. ಪರಮೇಶ್ವರ ಭಟ್ಟ, ಎನ್ಕೆ, ಜಯದೇವಿತಾಯಿ ಲಿಗಾಡೆ, ಕಯ್ಯಾರ ಕಿಞ್ಞಣ್ಣ ರೈ, ಕೆ.ಎಸ್. ನರಸಿಂಹಸ್ವಾಮಿ, ಜಿ.ಎಸ್. ಶಿವರುದ್ರಪ್ಪ, ಚೆನ್ನವೀರ ಕಣವಿ, ಕಾವ್ಯಾನಂದ, ನವ್ಯಕವಿಗಳಾದ ಪೇಜಾವರ ಸದಾಶಿವ ರಾವ್, ನಿಸಾರ್ ಅಹಮದ್, ಗೋಪಾಲಕೃಷ್ಣ ಅಡಿಗ, ಸುಬ್ರಾಯ ಚೊಕ್ಕಾಡಿ, ಮೊದಲಾದವರ ಜೊತೆಗೆ ಬಂಡಾಯ ಕವಿಗಳಾದ ಚಂದ್ರಶೇಖರ ಪಾಟೀಲ, ಸಿದ್ಧಲಿಂಗಯ್ಯ, ಹೊರೆಯಾಲ ದೊರೆಸ್ವಾಮಿ, ಪ್ರಭುಸ್ವಾಮಿ ಮಠ, ಚಂದ್ರಶೇಖರ ತಾಳ್ಯ, ಮಲ್ಲಿಕಾರ್ಜುನ ಹಿರೇಮಠ, ಆನಂದ ಝುಂಜರವಾಡ, ಅಲ್ಲಮಪ್ರಭು ಬೆಟ್ಟದೂರು, ಗವಿಸಿದ್ಧ ಬಳ್ಳಾರಿ, ಶೂದ್ರ ಶ್ರೀನಿವಾಸ, ಹೋ.ಮ. ಪಂಡಿತಾರಾಧ್ಯ, ಬಿ.ಟಿ. ಲಲಿತಾನಾಯಕ್, ಪ್ರಭು ಖಾನಾಪುರೆ, ಎಂ. ಲೋಕೇಶ, ದಿ.ಬಿ. ಢಂಗ, ಬಿ.ಎಸ್. ದುಂಡರಡ್ಡಿ, ಸತ್ಯಾನಂದ ಪಾತ್ರೋಟ, ಮಹಾಬಲೇಶ್ವರ, ಕಾಟ್ರಹಳ್ಳಿ, ಧರಣೇಂದ್ರ ಕುರಕುರಿ, ಆರ್.ಜಿ. ಹಳ್ಳಿ ನಾಗರಾಜ, ಎಂ.ಎಸ್. ವೇದಾ, ಸವಿತಾ ನಾಗಭೂಷಣ, ಮಾಧವಿ ಭಂಡಾರಿ, ಬಸವರಾಜ ಸಬರದ ಮೊದಲಾದವರು ಬರೆದ ಗಾಂಧಿ ಕುರಿತ ಕವಿತೆಗಳೂ ಇಲ್ಲವೆ. ಅಂದರೆ ಕನ್ನಡ ಸಾಹಿತ್ಯವು ಪಂಥ ಭೇದವಿಲ್ಲದೆ ಗಾಂಧೀಜಿಗೆ ತನ್ನ ಗೌರವವನ್ನು ಸಲ್ಲಿಸಿದೆ. ಅವುಗಳನ್ನು ಒಟ್ಟಾಗಿ ಓದುವುದೇ ಒಂದು ಸಂಭ್ರಮ.

**ಡಾ. ಪುರುಷೋತ್ತಮ ಬಿಳಿಮಲೆ**

## ಋತುಗಳ ವರ್ಣನೆಯ ವಿಶಿಷ್ಟ ಕಾರ್ಯಕ್ರಮ

ಶಿವಮೊಗ್ಗದ ಸೊರಬ ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ ಇದರ ಮಾಜಿ ಅಧ್ಯಕ್ಷರೂ ಆಗಿರುವ ಹಿರಿಯ ಸಾಹಿತಿ ಬಿ. ಸೂರ್ಯನಾರಾಯಣ ಹೆಗಡೆ ಅವರಿಂದ 'ಋತುಗಾನ' ಎಂಬ ರಾಗ ತಾಳಗಳ ಮೂಲಕ ಋತುಗಳನ್ನು ವರ್ಣಿಸುವ ವಿಶಿಷ್ಟ ಕಾರ್ಯಕ್ರಮವೊಂದು ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ 19.10.2019ರಂದು ಜರಗಿತು.

ಗಾನ ವ್ಯಾಖ್ಯಾನ ಕಾರ್ಯಕ್ರಮಕ್ಕೆ ಹೆಸರಾಗಿರುವ ಹೆಗಡೆಯವರು ಸಂತವಾಣಿ, ದಾಸರ ಪದ, ಮೊದಲಾದ ಸಾಹಿತ್ಯದ ಕುರಿತ ತಮ್ಮ ಜ್ಞಾನದಿಂದ ಈ ಕಾರ್ಯಕ್ರಮವನ್ನು ಆಸಕ್ತಿದಾಯಕವಾಗಿ ಪ್ರಸ್ತುತಪಡಿಸಿದರು. ಇದೇ ಸಂದರ್ಭದಲ್ಲಿ ಕಲಾವಿದ ಮತ್ತು ಸಾಹಿತಿ ಬಿ. ಸೂರ್ಯನಾರಾಯಣ ಹೆಗಡೆ ಅವರನ್ನು ಅಭಿನಂದಿಸಲಾಯಿತು .



ಸೂರ್ಯನಾರಾಯಣ ಹೆಗಡೆ ಅವರನ್ನು ಅಭಿನಂದಿಸಲಾಯಿತು

# ಕಲಾವಿದ ಭೀಮರಾವ್ ಮುರಗೋಡ ಸಂಸ್ಮರಣೆ




ದೆಹಲಿ ಕರ್ನಾಟಕ ಸಂಘ ಹಾಗೂ ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆ, ನವದೆಹಲಿ ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ 11.10.2019ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಖ್ಯಾತ ಚಿತ್ರಕಲಾವಿದ ದಿ. ಭೀಮರಾವ್ ಮುರಗೋಡ ಅವರಿಗೆ ಆಯೋಜಿಸಿದ 'ಕಲೆ ಹಾಗೂ ಸಂಗೀತ ನಮನ' ಕಾರ್ಯಕ್ರಮ ಅದ್ದೂರಿಯಿಂದ ನಡೆಯಿತು.

ಮುಖ್ಯ ಅತಿಥಿಯಾಗಿ ಪೂಜ್ಯಭಂತೆ ಅಶ್ವಘೋಶ್ ಅವರನ್ನು ಆಹ್ವಾನಿಸಲಾಗಿತ್ತು. ರಾಮಕುಮಾರ ಶಿಂಧೆ, ಹುಬ್ಬಳ್ಳಿ ಅಧ್ಯಕ್ಷತೆಯನ್ನು ವಹಿಸಿದ್ದರು.

ಖ್ಯಾತ ಚಿತ್ರಕಲಾವಿದ ದಿ. ಭೀಮರಾವ್ ಮುರಗೋಡ ಅವರ ಸ್ಮರಣಾರ್ಥ ಅವರು ರಚಿಸಿದ ಚಿತ್ರಕಲಾ ಪ್ರದರ್ಶನವನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಉದ್ಘಾಟಿಸಿದರು. ನಂತರ ಭೀಮರಾವ್ ಮುರಗೋಡರ ಕುರಿತ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಯಿತು. ಸಾಮಾಜಿಕ ಪ್ರಗತಿಶೀಲ ಸಂಸ್ಥೆಯ ಕಾರ್ಯದರ್ಶಿ ವಿ.ವಿ. ಬಿರಾದಾರ ಅವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ದಿ. ಭೀಮರಾವ್ ಮುರಗೋಡರವರು ನನ್ನ ಆತ್ಮೀಯ ಗೆಳೆಯನಲ್ಲದೆ, ಅಂತರರಾಷ್ಟ್ರೀಯ ಖ್ಯಾತಿ ಕಲಾವಿದರೆಂದು ಹೆಮ್ಮೆಯಿಂದ ಮಾತನಾಡಿದರು. ಅವರು ಬರಿ ಕಲಾಕಾರನಾಗದೆ ಸಂಗೀತಕಾರರು, ಕವಿಗಳು, ನಾಟಕಕಾರರು, ಸಿನಿಮಾ ನಟರು, ಸಾಮಾಜಿಕ ಸುಧಾರಕರಾಗಿದ್ದರೆಂದು ತಿಳಿಸಿದರು. ಮುರಗೋಡ ಅವರು ತಮ್ಮ ತೈಲ ಚಿತ್ರದ ಮುಖಾಂತರ ದೇಶವಿದೇಶಗಳ ಶ್ರೇಷ್ಠ ರಾಜಕೀಯ ವ್ಯಕ್ತಿಗಳ, ಧಾರ್ಮಿಕ, ಸಾಮಾಜಿಕ, ಸಂಗೀತ ಹೀಗೆ ಅನೇಕ ಮಹಾನ್ ಚೇತಕರ 500ಕ್ಕೂ ಹೆಚ್ಚು ತೈಲ ಚಿತ್ರಗಳನ್ನು ರಚಿಸಿದ ಮೇರು ಪರ್ವತರಾಗಿದ್ದಾರೆಂದು ತಿಳಿಸಿದರು.

ಡಾ. ವೆಂಕಟಾಚಲ ಹೆಗಡೆಯವರು ಮುರಗೋಡರ ಸರಳತನ, ಮುಗುಳ್ನಗೆಯನ್ನು ಸ್ಮರಿಸಿ, ಅವರು ಕರ್ನಾಟಕದ ಸಂಪತ್ತು ಮಾತ್ರವಲ್ಲ ದೇಶದ ಸಂಪತ್ತು ಆಗಿದ್ದರು. ದಿನಕ್ಕೆ 18ಗಂಟೆ ಕೆಲಸ ಮಾಡುತ್ತಾ ಇವರು ತಪ್ಪದೆ ಸಂಘಕ್ಕೆ ಬಂದು ಸಂಘದ ಕಾರ್ಯಕ್ರಮ ವೀಕ್ಷಿಸಿ ಹೋಗುತ್ತಿದ್ದರು. ಸಂಘದ ಉಪಾಧ್ಯಕ್ಷರಾಗಿದ್ದಾಗ ಅನೇಕ ಸಲಹೆ, ಸಹಕಾರ ನೀಡಿದವರಾಗಿದ್ದಾರೆ. ವಿಶ್ವದಲ್ಲಿ



**ಖ್ಯಾತ ಕಲಾವಿದ ದಿ. ಭೀಮರಾವ್ ಮುರಗೋಡ ಅವರು ರಚಿಸಿದ ಕಲಾಕೃತಿಗಳನ್ನು ಪ್ರದರ್ಶಿಸಲಾಯಿತು. ಈ ಸಂದರ್ಭದಲ್ಲಿ ಶ್ರೀಮತಿ ಶಾಲನ್ ಮುರಗೋಡ ಅವರನ್ನು ಅಭಿನಂದಿಸಲಾಯಿತು.**



ಕರುಣಾ ಮುರಗೋಡ



ಶ್ರದ್ಧಾ ಬೆನಕ



ಭೀಮಸೇನ ಭಜಂತ್ರಿ

ಹೆಸರಾದ ಕುತುಬ್‌ಮಿನಾರ್ ಸೇರಿಸಿ ಸಂಘದ ಲಾಂಛನ ರಚಿಸಿದ ಮುರಗೋಡ್ ಕರ್ನಾಟಕ ಸಂಘದ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಮತ್ತು ಅವರ ಕೃತಿಗಳ ಮೂಲಕ ಅಜರಾಮರ ಎಂದು ಹೇಳಿದರು.

ತಮ್ಮ ಹುಟ್ಟು ಹಬ್ಬ ಮತ್ತು ಮಕ್ಕಳ ದಿನಾಚರಣೆಯನ್ನು ಕುಷ್ಠರೋಗಿಗಳ ಸೇವೆ ಮಾಡುವ ಮೂಲಕ ಆಚರಿಸಿಕೊಳ್ಳುತ್ತಿದ್ದರು. 1976ರಿಂದಲೇ ಮುರಗೋಡರವರು ರಾಜಧಾನಿ ದೆಹಲಿಯಲ್ಲಿ ಕನ್ನಡ ಸಂಘ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕ ಇರಿಸಿಕೊಂಡು ಮೆಚ್ಚುವಂತ ಕಾರ್ಯ ಮಾಡುತ್ತಾ ಬಂದಿದ್ದಾರೆ ಎಂದು ತಿಳಿಸಿದರು.

ಸಮಾರಂಭದ ಗೌರವ ಅಧ್ಯಕ್ಷ ರಾಮಕುಮಾರ ಶಿಂಧೆ ಅವರು ಮಾತನಾಡಿ ಮುರಗೋಡು ನನ್ನ ಆತ್ಮೀಯ ಸಂಬಂಧಿಕರಲ್ಲದೆ ನಿಕಟ ಮಿತ್ರರಾಗದ್ದರು. ಅವರು ಸಮಾಜಕ್ಕೆ, ದೇಶಕ್ಕೆ, ಮಾನವಕುಲಕ್ಕೆ ಏನು ಕೊಡುತ್ತಿದ್ದೇನೆ ಎಂಬ ಚಿಂತೆಯಲ್ಲಿ ಇರುತ್ತಿದ್ದರು. ಎಂದೂ ಕೂಡಾ ಹರಟೆ ಮತ್ತು ವ್ಯರ್ಥ ಕಾಲಹರಣ ಮಾಡದೆ ಸಮಾಜ ಸೇವಕನಾಗಿ ಬಹುಮುಖ ವ್ಯಕ್ತಿ ವೈಶಿಷ್ಟ್ಯವನ್ನು ಮೆರೆದಿದ್ದಾರೆಂದು ಬಣ್ಣಿಸಿದರು.

ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜರು ಸ್ವಾಗತಿಸಿ ಮಾತನಾಡಿ ಮುರಗೋಡರು ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆಯ ಮುಖಾಂತರ



ರಾಮಕುಮಾರ್ ಶಿಂಧೆ

ಕುಷ್ಠರೋಗಿಗಳ, ಬಡಬಗ್ಗರ ಪುನರುತ್ಥಾನದ ಕಾರ್ಯಕ್ರಮ ಮಾಡಿದ್ದಾರೆ. ಸಂಘಜೀವಿಯಾಗಿ ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಾಲೆ, ಬಸವ ಇಂಟರ್‌ನ್ಯಾಶನಲ್ ಸೆಂಟರ್ ಸಂಸ್ಥೆಗಳಿಗೆ ನೀಡಿದ ಕೊಡುಗೆ ಅಪಾರ ಎಂದು ಹೇಳಿದರು.

ಸಂಸ್ಥೆಯ ಸಂಯೋಜಕ ಆನಂದ ಮುರಗೋಡರು ಜನ್ಮದಿನದ ನಿಮಿತ್ತ ಹೂಗುಚ್ಛ ನೀಡಿ ಅಭಿನಂದಿಸಿದರು.

ಸಾಮಾಜಿಕ ಪ್ರಗತಿಶೀಲ ಸಂಸ್ಥೆಯ ಅಧ್ಯಕ್ಷೆ ಹಾಗೂ ದಿವಂಗತ ಖ್ಯಾತ ಕಲಾವಿದ ಭೀಮರಾವ್ ಮುರಗೋಡ ಅವರ ಪತ್ನಿ ಶ್ರೀಮತಿ ಶಾಲನ್ ಮುರಗೋಡರು ತಮ್ಮ ಹಿಂದಿನ ಜೀವನದ ಮೆಲುಕು ಹಾಕುತ್ತ, ಮುರಗೋಡರು ಹಾಕಿಕೊಟ್ಟ ದಾರಿಯಲ್ಲಿ ಕೆಲಸ ಮಾಡುತ್ತಲಿದ್ದೇನೆ. ಯೋಗ ಅಭ್ಯಾಸ ಶಿಬಿರ ಆಯೋಜಿಸಿ ಯೋಗಾಸನ, ಪ್ರಾಣಾಯಾಮದ ಮೂಲಕ ಭಾವಿ ಮಕ್ಕಳ ಊರ್ಜಿತವಾಸ್ಥೆಗೆ ಶ್ರಮಿಸುತ್ತಿದ್ದೇನೆ ಎಂದರು.

ಗಂಗಾರಾಮ ಸಂಗೀತ ಬೆಂಗಳೂರು ಮತ್ತು ಸ್ಥಳೀಯ ಕಲಾವಿದ ಭೀಮಸೇನ ಭಜಂತ್ರಿ ಅವರಿಂದ ಸಂಗೀತ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು. ಖ್ಯಾತ ಗಾಯಕಿ ದಿ. ಮುರಗೋಡರವರ ಕಿರಿಯ ಮಗಳು ಕರುಣಾ ಮುರಗೋಡ ಚಾಚಾ ಅವರ ಅಚ್ಚುಮೆಚ್ಚಿನ ಸಂಗೀತ ಗಾಯನ ಮುಖಾಂತರ ಸಂಗೀತ ನಮನ ಸಲ್ಲಿಸಿದರು. ಮುರಗೋಡರ ಅನೇಕ ಸಂಬಂಧಿಕರು, ಸಂಗೀತಗಾರರಾದ ಶ್ರದ್ಧಾ ಬೆನಕ ಅವರು ಸಂಗೀತ ನೃತ್ಯದಿಂದ ಸಭೆಯನ್ನು ಮುಗ್ಧಗೊಳಿಸಿದರು. ರಾಮಕುಮಾರ್ ಶಿಂಧೆ ಅವರು ಸಂಗೀತದ ಮುಖಾಂತರ ಸಭೆಯನ್ನು ಮುಗ್ಧಗೊಳಿಸಿದರು.

ಸುಮಿತಾ ಮುರಗೋಡ ಹಾಗೂ ಪ್ರಶಾಂತ್ ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ವಂದಿಸಿದರು.

**ವಿ.ವಿ. ಬಿರಾದಾರ**




**ಖ್ಯಾತ ಕಲಾವಿದ ದಿ. ಭೀಮರಾವ್ ಮುರಗೋಡ ಅವರ ಕುರಿತು ವಿ.ವಿ. ಬಿರಾದಾರ ಅವರು ಬರೆದ ಲೇಖನವನ್ನು ಬಿಡುಗಡೆಗೊಳಿಸಲಾಯಿತು.**

# ದೆಹಲಿಯಲ್ಲಿ ಪ್ರಪ್ರಥಮ ಚುಟುಕು ಸಾಹಿತ್ಯ ಸಮಾವೇಶ

# ಜಗತ್ತಿನ ಸೃಷ್ಟಿಗೆ ಚುಟುಕು ಸಾಹಿತ್ಯ ಕಾರಣ

## - ಇರಾ ನೇಮು ಪೂಜಾರಿ



ಜಗತ್ತು ಸೃಷ್ಟಿಯಾಗಿದ್ದೇ 'ಓಂ' ಎಂಬ ಚುಟುಕು ಶಬ್ಧದಿಂದ. ಜಗತ್ತಿನ ಸೃಷ್ಟಿಗೆ ಚುಟುಕು ಸಾಹಿತ್ಯವೇ ಕಾರಣ ಎಂದು ಹಿರಿಯ ಚುಟುಕು ಸಾಹಿತಿ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷ ಇರಾ ನೇಮು ಪೂಜಾರಿ ಅವರು ಹೇಳಿದರು.

ದೆಹಲಿ ಕರ್ನಾಟಕ ಸಂಘ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ದಿನಾಂಕ 13.10.2019ರಂದು ದೆಹಲಿಯಲ್ಲಿ ಪ್ರಥಮವಾಗಿ ಏರ್ಪಡಿಸಿದ್ದ ಚುಟುಕು ಸಾಹಿತ್ಯೋತ್ಸವ 2019 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಭಾರತ ದೇಶಕ್ಕೆ ಬ್ರಿಟಿಷರಿಂದ ಮುಕ್ತಿ ದೊರಕಿ ದೇಶ ಸ್ವತಂತ್ರವಾಗಿದ್ದು 'ಕ್ವಿಟ್ ಇಂಡಿಯಾ' ಎಂಬ ಚುಟುಕು ಶಬ್ಧದಿಂದ ಎಂದು ನೇಮು ಪೂಜಾರಿ ಅವರು ಸ್ಮರಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಇದು ದೆಹಲಿ ಕರ್ನಾಟಕ ಸಂಘದಲ್ಲಿ ನಡೆಯುತ್ತಿರುವ ವಿಶಿಷ್ಟ ಸಾಹಿತ್ಯ ಕಾರ್ಯಕ್ರಮ. ಸಂಘದ ಚಟುವಟಿಕೆಗಳಲ್ಲಿ ಐತಿಹಾಸಿಕ ಎಂದು ಡಾ. ಹೆಗಡೆ ಬಣ್ಣಿಸಿದರು. ಅವರು ಸ್ವತಃ ತಾವೇ ಬರೆದ ಕೆಲವು ಚುಟುಕು ಕವಿತೆಗಳನ್ನು ಪ್ರಸ್ತುತಪಡಿಸಿದರು.

ಮುಖ್ಯ ಅತಿಥಿ ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆಯವರು ಮಾತನಾಡಿ ಚುಟುಕು ಸಾಹಿತ್ಯ ಬೆಳೆಯಲಿ ಆದರೆ ನಮ್ಮ ಬದುಕು ಚುಟುಕಾಗದಿರಲಿ ಎಂದು ಆಶಿಸಿದರು.

ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಸಾಹಿತಿ ಡಾ. ಪುರುಷೋತ್ತಮ ಬಿಳಿಮಲೆ,ಕವಿ ಎಂ. ಜನಾರ್ದನ ಭಟ್ ಮೊಗರ್ನಾಡ್, ರಾಧಾಕೃಷ್ಣ ಕೆ. ಉಳಿಯತಡ್ಕ ಉಪಸ್ಥಿತರಿದ್ದು ಮಾತನಾಡಿದರು.

ಇದೇ ಸಂದರ್ಭದಲ್ಲಿ ಡಾ. ಅಮೃತಸಿಂಧು ಅವರ 'ನನ್ನೊಳಗಿನ ನಾನು' ವೈದ್ಯಕೀಯ ಲೇಖನ ಸಂಗ್ರಹ ಹಾಗೂ ಸವಿ ಹೃದಯದ ಕವಿಮಿತ್ರರ ವೇದಿಕೆ ಪೆರ್ಲ ಬಳಗದ 'ಭಾವ ತರಂಗ' ಕವನ ಸಂಕಲನವನ್ನು ಡಾ. ಪುರುಷೋತ್ತಮ ಬಿಳಿಮಲೆ, ಡಾ. ಅವನೀಂದ್ರನಾಥ್ ರಾವ್ ಬಿಡುಗಡೆಗೊಳಿಸಿದರು. ಸಾಹಿತ್ಯ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧಕರಾದ 10 ಮಂದಿಯನ್ನು ಪುರಸ್ಕರಿಸಲಾಯಿತು.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಸ್ವಾಗತಿಸಿದರು. ಚುಟುಕು ಸಾಹಿತ್ಯ ಪರಿಷತ್ತು ಕಡಬ ವಲಯ ಗೌರವಾಧ್ಯಕ್ಷ ಜಯಾನಂದ ಪೆರಾಜೆ ಪ್ರಸ್ತಾವನೆಗೈದು ಆಶಯ ನುಡಿ ಹೇಳಿದರು. ಜಿಲ್ಲಾ



ತಾರಾನಾಥ ಬೋಳಾರ್ ಮತ್ತು ಡಾ. ಅಮೃತಸಿಂಧು



ಡಾ. ಎಂ. ಜಗದೀಶ್ ಶೆಟ್ಟಿ



ಪವಿತ್ರ ತಮಣ್‌ಕರ್



ಪರಿಮಳ ಮಹೇಶ್‌ರಾವ್

ಕಾರ್ಯದರ್ಶಿ ಹ.ಸು. ಒಡ್ಡಂಬೆಟ್ಟು ವಂದಿಸಿದರು.


ಚುಟುಕುಗಳು ಜೀವನೋತ್ಸವ ಮೂಡಿಸಬೇಕು ಎಂದು ಚುಟುಕು ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ವೇದಮೂರ್ತಿ ಜನಾರ್ದನ ಭಟ್ ಹೇಳಿದರು.

ಈ ಕವಿಗೋಷ್ಠಿಯ ಮುಖ್ಯ ಅತಿಥಿಗಳಾಗಿ ಕವಿ, ಪತ್ರಕರ್ತ ರಾಧಾಕೃಷ್ಣ ಕೆ. ಉಳಿಯತಡ್ಕ, ಚುಟುಕು ಸಾಹಿತ್ಯ ಪರಿಷತ್ತಿನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹ.ಸು. ಒಡ್ಡಂಬೆಟ್ಟು ಸವಿ ಹೃದಯದ ಕವಿ ಮಿತ್ರರು ವೇದಿಕೆ ಪೆರ್ಲ ಕಾಸರಗೋಡು ಇದರ ಸಂಚಾಲಕ ಸುಭಾಷ್ ಪೆರ್ಲ, ಚು.ಸಾ.ಪ. ಕಡಬ ಘಟಕದ ಗೌರವ ಅಧ್ಯಕ್ಷ ಜಯಾನಂದ ಪೆರಾಜೆ ಭಾಗವಹಿಸಿದ್ದರು.

ಸಾಹಿತಿ, ಶಿಕ್ಷಕಿ ವಿಜಯಲಕ್ಷ್ಮೀ ಕಟೀಲು ಕವಿಗಳನ್ನು ಪರಿಚಯಿಸಿ ನಿರೂಪಿಸಿದರು. ಬಳಿಕ ನಡೆದ ಕವಿಗೋಷ್ಠಿಯಲ್ಲಿ ಆಕೃತಿ ಐ.ಎಸ್. ಭಟ್, ಶಾಂತ ಪುತ್ತೂರು, ಗುಣವತಿ ಕಿನ್ಯಾ, ಮಲ್ಲಿಕಾ ಜೆ. ರೈ., ಹುಂಡೆ ಕೃಷ್ಣ, ದೆಹಲಿಯ ಪವಿತ್ರ ತಮಣ್‌ಕರ್, ಪ್ರಮೀಳಾ ಚುಳ್ಳಿಕ್ಕಾನ, ಪ್ರಭಾವತಿ ಕೆದಿಲಾಯ, ಪ್ರೇಮ ಉದಯ ಕುಮಾರ್, ಕುಶಾಲಾಕ್ಷಿ ಕಣ್ವತೀರ್ಥ, ಚಂದ್ರಿಕಾ ಡಿ. ಕೈರಂಗಳ, ರತ್ನ ಹಾಲಪ್ಪ ಗೌಡ, ಗಾಯತ್ರಿ ಕದಂಬ, ಪರಮೇಶ್ವರ ನಾಯ್ಕ್ ಬಾಳೆಗುಳಿ, ಹರೀಶ್ ಸುಲಾಯ ಒಡ್ಡಂಬೆಟ್ಟು, ಅಭಿ ಪೆರ್ಲ, ಅಭ್ಯುದಯ ಎಂ. ಜೈನ್, ಸುಭಾಷ್ ಪೆರ್ಲ, ಆನಂದ ಪೆರ್ಲ, ಬದ್ರುದ್ದೀನ್ ಕೂಳೂರು, ತಾರಾನಾಥ ಬೋಳಾರ, ದೇವರಾಜ ಆಚಾರ್ಯ ಕುಂಬಳೆ, ಹರ್ಷಿತ್ ಕುಮಾರ್, ಅಭಿಷೇಕ್, ಲಾಲಿತ್ಯಾ ಜಿ.ಕೆ., ಅಪರ್ಣಾ ಆಳ್ವ, ಜಯಾನಂದ ಪೆರಾಜೆ, ಸುರೇಖಾ ಯಳವಾರ, ಮಾದವ ಉಳ್ಳಾಲ, ಡಾ. ಜಗದೀಶ್ ಶೆಟ್ಟಿ ಮತ್ತಿತರರು ಸ್ವರಚಿತ ಚುಟುಕು ಕವನಗಳನ್ನು ವಾಚಿಸಿದರು. ಸುರೇಖಾ ಯಳವಾರ, ಪೂಜಾ ಪ್ರದೀಪ್ ಕಾರ್ಯಕ್ರಮ ನಿರೂಪಿಸಿದರು. ಚುಟುಕು ಸಾಹಿತ್ಯ ವೇದಿಕೆ ಕಡಬ ಘಟಕದ ಉಪಾಧ್ಯಕ್ಷೆ ಶಾಂತಾ ಪುತ್ತೂರು ವಂದಿಸಿದರು.

ಚುಟುಕು ಸಾಹಿತ್ಯೋತ್ಸವದ ಅಂಗವಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿದವು. ತಾರಾನಾಥ ಬೋಳಾರ್ ಮತ್ತು ಡಾ. ಅಮೃತಸಿಂಧು ಅವರ ಶಿಲಾಬಾಲಿಕೆ ನೃತ್ಯರೂಪಕ, ಡಾ. ಎಂ. ಜಗದೀಶ್ ಶೆಟ್ಟಿ ಬಿಜೈ ಅವರಿಂದ ಯೋಗ ಪ್ರಾತ್ಯಕ್ಷಿಕೆ ಹಾಗೂ ಪರಿಮಳ ಮಹೇಶ್‌ರಾವ್ ಅವರ ನೃತ್ಯ ಗಮನಸೆಳೆಯಿತು.

# 'ಭಾವ ತರಂಗ' ಮತ್ತು 'ನನ್ನೊಳಗಿನ ನಾನು' ಕೃತಿ ಬಿಡುಗಡೆ




ಡಾ. ಪುರುಷೋತ್ತಮ ಬಿಳಿಮಲೆ 'ಭಾವ ತರಂಗ' ಕೃತಿ ಬಿಡುಗಡೆಗೊಳಿಸಿದರು

ವಿವಿಧ ಕವಿಗಳು ರಚಿಸಿದ ಸವಿಹೃದಯದ ಕವಿ ಮಿತ್ರರ ವೇದಿಕೆ, ಪೆರ್ಲ ಇವರು ಪ್ರಕಟಿಸಿದ 'ಭಾವ ತರಂಗ' ಕವನ ಸಂಕಲನ ಮತ್ತು ಡಾ. ಅಮೃತಸಿಂಧು ಅವರು ಬರೆದ 'ನನ್ನೊಳಗಿನ ನಾನು' ಕೃತಿಗಳು ದೆಹಲಿ ಕರ್ನಾಟಕ ಸಂಘದಲ್ಲಿ ಬಿಡುಗಡೆಗೊಂಡವು.

ದೆಹಲಿ ಕರ್ನಾಟಕ ಸಂಘ ಮತ್ತು ದಕ್ಷಿಣಕನ್ನಡ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು ಆಶ್ರಯದಲ್ಲಿ ದಿನಾಂಕ 13.10.2019ರಂದು ನಡೆದ ಚುಟುಕೋತ್ಸವ ಸಮಾವೇಶದಲ್ಲಿ ಈ ಕೃತಿಗಳು ಲೋಕಾರ್ಪಣೆಗೊಂಡವು. 'ಭಾವ ತರಂಗ' ಕೃತಿ ಬಿಡುಗಡೆಗೊಳಿಸಿ ಮಾತನಾಡಿದ ದೆಹಲಿಯ ಜವಾಹರಲಾಲ್ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥ ಮತ್ತು ಸಾಹಿತಿ ಡಾ. ಪುರುಷೋತ್ತಮ ಬಿಳಿಮಲೆ ಮಾತನಾಡಿ ಭಾಷೆಗಿಂತ ಭಿನ್ನವಾದ ಸಂಕೇತ ಭಾಷೆ ಕಾವ್ಯದಲ್ಲಿ ಕಾಣಬೇಕಾಗಿದೆ. ಇಂತಹ ಸಾಹಿತ್ಯ ಕೃತಿಗಳಿಂದಾಗಿಯೇ ಕನ್ನಡ ಭಾಷೆ ಬೆಳೆದಿದೆ ಎಂದು ಅಭಿಪ್ರಾಯಪಟ್ಟರು.

'ನನ್ನೊಳಗಿನ ನಾನು' ಕೃತಿ ಬಿಡುಗಡೆಗೊಳಿಸಿ ಮಾತನಾಡಿದ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷ ಮತ್ತು ಸಾಹಿತಿ ಡಾ. ಅವನೀಂದ್ರನಾಥ್ ರಾವ್ ಅವರು ಮಾತನಾಡಿ 'ನನ್ನೊಳಗಿನ ನಾನು' ಕೃತಿಯು ಮಾನವ ಶರೀರದ ರಚನೆ ಕುರಿತು ಸರಳವಾಗಿ ತಿಳಿಸುತ್ತಾ ದೇಹದ ಸಂರಕ್ಷಣೆಗೆ ಅಗತ್ಯ ಮಾಹಿತಿಗಳನ್ನು ಒದಗಿಸುತ್ತದೆ. ಕನ್ನಡದಲ್ಲಿ ಡಾ. ಅನುಪಮ ನಿರಂಜನ ಮೊದಲಾದವರು ವೈದ್ಯ ಸಾಹಿತ್ಯಕ್ಕೆ ವಿಶೇಷ ಕೊಡುಗೆಗಳನ್ನು ನೀಡಿದ್ದು ಇಂತಹ ಅಪರೂಪದ ಕೃತಿಗಳು ಸಮಾಜಕ್ಕೆ ಬಹಳ ಅಗತ್ಯವಾಗಿದೆ ಎಂದು ಹೇಳಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ತಾರಾನಾಥ ಬೋಳಾರ್, ಗೌರವಾಧ್ಯಕ್ಷ ಇರಾ ನೇಮು ಪೂಜಾರಿ, ಮುಖ್ಯ ಅತಿಥಿ ವಸಂತ ಶೆಟ್ಟಿ ಬೆಳ್ಳಾರೆ, ಪತ್ರಕರ್ತ ರಾಧಾಕೃಷ್ಣ ಉಳಿಯತಡ್ಕ ಮೊದಲಾದವರು ಉಪಸ್ಥಿರಿದ್ದರು. ಸುರೇಖಾ ಯಳವಾರ ಕಾರ್ಯಕ್ರಮ ನಿರೂಪಿಸಿದರು.




ಡಾ. ಅವನೀಂದ್ರನಾಥ್ ರಾವ್ 'ನನ್ನೊಳಗಿನ ನಾನು' ಕೃತಿ ಬಿಡುಗಡೆಗೊಳಿಸಿದರು

# ಮಾತೃಮಂಡಳಿಯಿಂದಲೇ ಹವ್ಯಕ ಸಂಪ್ರದಾಯದ ಸಂರಕ್ಷಣೆ

## - ಪ್ರೊ. ಪಿ. ಎನ್. ಶಾಸ್ತ್ರೀ



ಗೋಕರ್ಣಮಂಡಳ (ರಿ) ನವದೆಹಲಿ ಯ ನಲವತ್ತನೇ ವಾರ್ಷಿಕೋತ್ಸವವು ದೆಹಲಿ ಕರ್ನಾಟಕ ಸಂಘದ ಸಂಯುಕ್ತಾಶ್ರಯದಲ್ಲಿ ದಿನಾಂಕ 19.10.2019ರಂದು ಬಹಳ ವಿಜೃಂಭಣೆಯಿಂದ ನಡೆಯಿತು. ಮಾತೃಮಂಡಳಯ ಸ್ವರಚಿತ ಸ್ವಾಗತ ಗೀತೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು.

ವೇದಮೂರ್ತಿ, ರಮೇಶ ವರ್ಧನ್, ವೇದಮೂರ್ತಿ, ಸತೀಶ ಭಟ್ ಮತ್ತು ವಿದ್ವಾನ್ ಗಣೇಶ ಹೆಗಡೆ ವೇದಘೋಷ ಮಾಡಿದರು. ಮುಖ್ಯ ಅತಿಥಿ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ಉಪಕುಲಪತಿ ಪ್ರೊ. ಪಿ. ಎನ್. ಶಾಸ್ತ್ರೀಯವರು ಸಮಾರಂಭವನ್ನು ದೀಪ ಬೆಳಗುವುದರ ಮೂಲಕ ಉದ್ಘಾಟಿಸಿ, ಗೋಕರ್ಣವಾಣಿ ಸ್ಮರಣಸಂಚಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿದರು.

ಹವ್ಯಕ ಸಂಸ್ಕೃತಿ ಮತ್ತು ಸಂಪ್ರದಾಯವನ್ನು ಕಾಪಾಡಿಕೊಂಡು ಬರುವಲ್ಲಿ ಮಹಿಳೆಯರ ಪಾತ್ರ ಅಪಾರ. ಅವರಿಂದಲೇ ಹವ್ಯಕರು ಸಮಾಜದಲ್ಲಿ ಉತ್ತಮ ಸ್ಥಾನ ಪಡೆಯಲು ಸಾಧ್ಯವಾಗಿದೆ ಎಂದರು. ಅವರು ಆದಿಶಂಕರಾಚಾರ್ಯರ ಶ್ಲೋಕವೊಂದನ್ನು ಉದಾಹರಿಸುತ್ತ ಭವಾನಿಯಾದ ಪಾರ್ವತಿ ಜೊತೆಯಲ್ಲಿ ಇರುವುದರಿಂದಲೇ ಪರಶಿವನ ಶಕ್ತಿ, ಪ್ರಭೆಗಳು ಹೇಗೆ ವರ್ಧಿಸಿವೆಯೋ ಹಾಗೆಯೇ ಮಾತೃವರ್ಗದ ಆಸ್ಥೆಯಿಂದಲೇ ಹವ್ಯಕರ ಸ್ಥಾನಮಾನ ಉತ್ತುಂಗದಲ್ಲಿದೆ ಎಂದು ಕೊಂಡಾಡಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಇತ್ತೀಚಿನ ದಿನಗಳಲ್ಲಿ ಪಟ್ಟಣ ಸೇರುತ್ತಿರುವ ಹವ್ಯಕರಿಗೆ ಊರಿನಲ್ಲಿರುವ ಕೃಷಿಭೂಮಿಯನ್ನು ನೋಡಿಕೊಳ್ಳಲಾಗದೇ ಇರುವುದು ಚಿಂತಾಜನಕವಾಗಿದೆ. ಇದಕ್ಕೆ ಯಾವುದಾದರೊಂದು ಪರ್ಯಾಯ ಮಾರ್ಗವನ್ನು ಕಂಡುಕೊಳ್ಳುವುದು ಅನಿವಾರ್ಯವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಸಂಚಾಲಕ ನರಸಿಂಹ ಹೆಗಡೆ ಬಾಳೆಗದ್ದೆ ಅವರು ಮಾತನಾಡಿ, ಈ ನಲವತ್ತು ವರ್ಷಗಳಲ್ಲಿ ನವದೆಹಲಿಯಲ್ಲಿ ಗೋಕರ್ಣಮಂಡಲದ ಉಗಮ ಬೆಳವಣಿಗೆ ಮತ್ತು ಇಂದು ಅದರ ಸದಸ್ಯರು ಯಾವೆಲ್ಲಾ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆಂಬುದನ್ನು ವಿಸ್ತೃತವಾಗಿ ವಿವರಿಸಿದರು.

ಗೋಕರ್ಣವಾಣಿ ಸ್ಮರಣಸಂಚಿಕೆಯ ಸಂಪಾದಕಿ ಶ್ರೀಮತಿ ರೋಹಿಣಿ ಭಟ್ ಮಾತನಾಡಿ ಮೊದಮೊದಲು ಹತ್ತು ಪುಟಗಳಾದರೂ ಆಗಬಹುದೇ ಎಂಬ ಸಂಶಯ ಉಂಟಾಗಿತ್ತು. ಆದರೆ ಕೊನೆಯ ಹದಿನೈದು ದಿನಗಳಲ್ಲಿ ಲೇಖನದ ಮಹಾಪೂರವೇ ಹರಿದುಬಂದು ಅರವತ್ತು ಪುಟಗಳು ತುಂಬಿಹೋದವು. ಗೋಕರ್ಣವಾಣಿಯ ಸಂಪಾದನೆ ಮತ್ತು ವಿನ್ಯಾಸದಲ್ಲಿ ಸಂತೋಷ ಉಪಾಧ್ಯಾಯರ ಪರಿಶ್ರಮ ಅಪಾರವಾಗಿದೆ ಎಂದು ಶ್ಲಾಘಿಸಿದರು.

ಗೋಕರ್ಣಮಂಡಳದ ಅಧ್ಯಕ್ಷ ಡಾ. ಎಮ್. ನಾರಾಯಣ ಭಟ್ ಅವರು ಹವ್ಯಕರೆಲ್ಲ ಅನಿವಾರ್ಯ ಕಾರಣಗಳಿಂದ ತಾಯಿಬೇರನ್ನು ಬಿಟ್ಟು ದೂರದೂರುಗಳಿಗೆ ಬಂದರೂ ತಮ್ಮ ಪರಂಪರೆ ಸಂಸ್ಕೃತಿಗಳನ್ನು ಮರೆಯದೇ




'ಗೋಕರ್ಣವಾಣಿ' ಸ್ಮರಣಸಂಚಿಕೆ ಬಿಡುಗಡೆಗೊಳಿಸಲಾಯಿತು



ಗಾಯಕಿ ಕು. ದೀಪಾಲಿ ಭಟ್

ಮುಂದಿನ ಪೀಳಿಗೆಗೂ ಸಹ ಅದನ್ನು ಹಸ್ತಾಂತರಿಸುವ ಪ್ರಯತ್ನಗಳ ಪ್ರತಿರೂಪವೇ ಈ ಸಮಾರಂಭಗಳು. ಅದರಲ್ಲಿಯೂ ದೆಹಲಿಯಂತಹ ಪಟ್ಟಣದಲ್ಲಿ ವಾಸಮಾಡುತ್ತ ತನ್ನದೇ ಸಂಘವನ್ನು ಕಟ್ಟಿ ನಲವತ್ತನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವುದು ನಾವು ನಮ್ಮ ಸಂಪ್ರದಾಯ, ಪರಂಪರೆಗೆ ಕೊಟ್ಟ ಮಹತ್ವವನ್ನು ಬಿಂಬಿಸುತ್ತದೆ ಎಂದು ನುಡಿದರು.

ಸಭಾಧ್ಯಕ್ಷ ರಾಮಚಂದ್ರ ಭಟ್ ಅವರು ದೆಹಲಿಯ ಹವ್ಯಕರನ್ನು ಒಂದು ಸಂಘಟನೆಯಡಿಯಲ್ಲಿ ಒಂದುಗೂಡಿಸಲು ಗೋಕರ್ಣಮಂಡಳವನ್ನು ಕಟ್ಟಿ ಬೆಳೆಸಿದ ನಮಗೆ ಈ ನಲವತ್ತನೇ ವಾರ್ಷಿಕೋತ್ಸವವು ಹೊಸ ಹುರುಪನ್ನು ತುಂಬುತ್ತಿದೆ. ಇದು ಸುವರ್ಣಮಹೋತ್ಸವಕ್ಕೆ ನಾಂದಿಯಾಗಲೆಂದು ಶುಭ ಹಾರೈಸಿದರು.


ನಂತರ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹಿರಿಯ ಹವ್ಯಕರನ್ನು ಸನ್ಮಾನಿಸಲಾಯಿತು. ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ ಸಾಧನೆ ಮಾಡಿದ 25ಕ್ಕೂ ಹೆಚ್ಚು ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ವಿತರಿಸಲಾಯಿತು. ನಂತರ ಗೋಕರ್ಣ ಮಂಡಳದ ಸದಸ್ಯರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಪಂಡಿತ ಎಮ್. ಪಿ. ಹೆಗಡೆ ಪಡಗೇರಿ ಯವರ ಶಾಸ್ತ್ರೀಯ ಗಾಯನ ಸಭೆಯ ಮೆರಗನ್ನು ಹೆಚ್ಚಿಸಿತು. ಶಿರಸಿಯ ಕಾಶ್ಯಪ ಪ್ರತಿಷ್ಠಾನ, ಗಡಿಗೆಹೊಳೆ ಯ ಮಹಿಳಾ ತಂಡದಿಂದ ಆಯೋಜಿಸಲಾದ ಬಡಗುತಿಟ್ಟಿನ ಯಕ್ಷಗಾನ ಸುಧನ್ವಾರ್ಜುನ ಕಾಳಗ ಸಮಾರಂಭದ ಪ್ರಮುಖ ಆಕರ್ಷಣೆಯಾಗಿತ್ತು. ಸುಮಾರು 400 ಕ್ಕೂ ಹೆಚ್ಚು ಕನ್ನಡಿಗರು ಸಮಾರಂಭದ ಸಾಕ್ಷಿಯಾದರು. ಪ್ರಧಾನ ಕಾರ್ಯದರ್ಶಿ ಸತೀಶ ಹೆಗಡೆ ಕಳವೆ ವಂದಿಸಿದರು.

ಶ್ರೀಮತಿ ಶಾಲಿನಿ ಪ್ರಶಾಂತ ಮತ್ತು ಶ್ರೀಮತಿ ಪೂರ್ಣಿಮಾ ಹೆಗಡೆ ನಿರೂಪಿಸಿದರು. ಶ್ರೀಮತಿ ಆರತಿ ಹೆಗಡೆ, ಶ್ರೀಮತಿ ಪ್ರಭಾ ಉಪಾಧ್ಯಾಯ, ಶ್ರೀಮತಿ ವಾಣೀ ಸತೀಶ್, ಶ್ರೀಮತಿ ವಿದ್ಯಾ ಭಟ್ ಸಹಕರಿಸಿದರು. ದೆಹಲಿ ಕರ್ನಾಟಕ ಸಂಘದ ಕಾರ್ಯದರ್ಶಿ ಸಿ.ಎಂ. ನಾಗರಾಜ್, ಗೋಕರ್ಣಮಂಡಳದ ಖಜಾಂಚಿ ಶ್ರೀಮತಿ ಲಲಿತಾ ಹೆಗಡೆ ಉಪಸ್ಥಿತರಿದ್ದರು.

**ಗಣೇಶ ಹೆಗಡೆ**




**ಕಾಶ್ಯಪ ಪ್ರತಿಷ್ಠಾನ, ಗಡಿಗೆಹೊಳೆಯ ಮಹಿಳಾ ತಂಡದಿಂದ ಪ್ರದರ್ಶನಗೊಂಡ ಯಕ್ಷಗಾನ**


**ಪಂಡಿತ ಎಮ್. ಪಿ. ಹೆಗಡೆ ಪಡಗೇರಿ ಯವರ ಶಾಸ್ತ್ರೀಯ ಗಾಯನ**



**ಕು. ಅನಘಾ ಮತ್ತು ಕು. ಅಮೋಘ**


**ಕು. ನಿಚಿತಾ**



**ಸ್ವಾಗತಗೀತೆ ಹಾಡಿದ ಗೋಕರ್ಣ ಮಂಡಳದ ಮಹಿಳಾ ಸದಸ್ಯರು**

# ಮಕ್ಕಳ ಕುಂಚದಲ್ಲಿ ಅರಳಿದ 'ಗಾಂಧಿ'





ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕರ್ನಾಟಕ ವಾರ್ತಾಕೇಂದ್ರ, ನವದೆಹಲಿ ಹಾಗೂ ದೆಹಲಿ ಕರ್ನಾಟಕ ಸಂಘ ಇವರ ಸಹಯೋಗದೊಂದಿಗೆ ಮಹಾತ್ಮಾ ಗಾಂಧೀಜಿಯವರ 150ನೇ ವರ್ಷಾಚರಣೆ ಅಂಗವಾಗಿ ದಿನಾಂಕ 02.10.2019ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಮಹಾತ್ಮ ಗಾಂಧೀಜಿಯವರ ಕುರಿತ ಚಿತ್ರ ಕಲಾ ಸ್ಪರ್ಧೆ ಮತ್ತು ಸಂವಾದ ಕಾರ್ಯಕ್ರಮ ಜರಗಿತು.

'ಮಕ್ಕಳು ಕಂಡಂತೆ ಗಾಂಧಿ' ವಿಷಯಾಧರಿತ ಚಿತ್ರಕಲಾ ಸ್ಪರ್ಧೆಯನ್ನು ಅಂತಾರಾಷ್ಟ್ರೀಯ ಚಿತ್ರ ಕಲಾವಿದ ಸುದೀರ್ ಪಡ್ನಿಸ್ ಮಾರ್ಗದರ್ಶನದಲ್ಲಿ ಆಯೋಜಿಸಲಾಗಿತ್ತು. ಸ್ಪರ್ಧೆಯಲ್ಲಿ 40ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿ, ತಮ್ಮ ಮನಸ್ಸಿನಲ್ಲಿ ಮೂಡಿಬಂದ ಗಾಂಧಿಜೀಯವರ ವಿಚಾರಧಾರೆಯ ಚಿತ್ರಗಳನ್ನು ಕುಂಚದಲ್ಲಿ ಸುಂದರವಾಗಿ ಬಿಡಿಸಿದರು.

ಬಳಿಕ ಚಿತ್ರಗಳನ್ನು ಸಂಘದ ಕಲಾಗ್ಯಾಲರಿಯಲ್ಲಿ ಪ್ರದರ್ಶಿಸಲಾಯಿತು. ನಂತರ ವಿಜೇತ ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಮಕ್ಕಳಿಗೆಲ್ಲಾ ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ವಿತರಿಸಲಾಯಿತು. ಕುಮಾರಿ ಅನಘಾ ಮತ್ತು ಡಿಯೋನ್ ಡಿ'ಸೋಜ ಪ್ರಥಮ ಬಹುಮಾನ ಪಡೆದರು.

ಈ ಸಮಯದಲ್ಲಿ ಮಕ್ಕಳಿಗೆ ಗಾಂಧೀಜಿಯವರ ಬಗ್ಗೆ ರಸಪ್ರಶ್ನೆಗಳನ್ನು ಕೇಳುವ ಮೂಲಕ ಗಾಂಧೀಜಿಯವರ ವಿಚಾರಧಾರೆಗಳನ್ನು ತಿಳಿಸಲಾಯಿತು.

ಕರ್ನಾಟಕ ವಾರ್ತಾ ಕೇಂದ್ರದ ಉಪ ನಿರ್ದೇಶಕ (ಪ್ರ) ಡಾ. ಮೈಸೂರು ಗಿರೀಶ್ ಎಲ್.ಪಿ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಕಾರ್ಯದರ್ಶಿ ಸಿ.ಎಂ. ನಾಗರಾಜ್, ಸಾಹಿತಿ ಡಾ. ಪುರುಷೋತ್ತಮ ಬಿಳಿಮಲೆ ಮೊದಲಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ವರದಿ :**
**ಕರ್ನಾಟಕ ವಾರ್ತಾ ಕೇಂದ್ರ**





ಕು. ಅನಘಾ



ಡಿಯೋನ್ ಡಿಸೋಜ

# ಪ್ರಸಂಗ ಸಾಹಿತ್ಯಕ್ಕೆ ಸಾಹಿತ್ಯ ಚರಿತ್ರೆಯಲ್ಲಿ ಮನ್ನಣೆ ಸಿಗಬೇಕು




'ವಿಪುಲವಾಗಿರುವ ಯಕ್ಷಗಾನ ಪ್ರಸಂಗ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸೂಕ್ತವಾದ ಮನ್ನಣೆ ದೊರೆಯಬೇಕಾಗಿದೆ' ಎಂಬ ಅಭಿಪ್ರಾಯವು ದೆಹಲಿಯಲ್ಲಿ ನಡೆದ ಯಕ್ಷಗಾನ ಸಾಹಿತ್ಯ ವಿಚಾರ ಸಂಕಿರಣದಲ್ಲಿ ಪ್ರಕಟವಾಯಿತು. ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಯಕ್ಷಧ್ರುವ ಪಟ್ಲ ಫೌಂಡೇಷನ್ ಮಂಗಳೂರು ಇವರು ದಿನಾಂಕ 12 ಅಕ್ಟೋಬರ್ 2019ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನಡೆಸಿದ ವಿಚಾರ ಸಂಕಿರಣದಲ್ಲಿ ಈ ಅಭಿಪ್ರಾಯ ಪ್ರಕಟವಾಯಿತು.

ಈ ಮಹತ್ವದ ವಿಚಾರ ಸಂಕಿರಣದಲ್ಲಿ ರಾಮಾಯಣಗಳ ಪ್ರಸಂಗಗಳ ಬಗ್ಗೆ ಪ್ರಬಂಧ ಮಂಡಿಸಿದ ಯಕ್ಷಗಾನ ಅಕಾಡೆಮಿಯ ಮಾಜಿ ಅಧ್ಯಕ್ಷ ಪ್ರೊ. ಎಂ.ಎಲ್. ಸಾಮಗ ಅವರು "ಯಕ್ಷಗಾನ ಪ್ರಸಂಗಗಳನ್ನು ಯಾವ ಮಾನದಂಡಗಳಿಂದ ಅಳೆಯಬೇಕು ಎಂಬುದನ್ನು ಮೊದಲು ಸ್ಪಷ್ಟಪಡಿಸಿಕೊಳ್ಳಬೇಕು. ಜೊತೆಗೆ ಅನೇಕ ಪ್ರಸಂಗಗಳನ್ನು ಪ್ರದರ್ಶನಕ್ಕಾಗಿಯೇ ಬರೆಯಲಾಗಿದ್ದು, ಪ್ರದರ್ಶನ ಪಠ್ಯಗಳನ್ನು ಸಾಹಿತ್ಯದ ಭಾಗವಾಗಿ ಪರಿಗಣಿಸಬೇಕು, ಮತ್ತು ಕನ್ನಡದ ಪ್ರಮುಖ ವಿಮರ್ಶಕರು ಈ ಕಡೆ ಗಮನ ಹರಿಸಬೇಕು' ಎಂದರು. ಅವರು ರಾಮಾಯಣ ಕಥೆಯನ್ನು ಆಧರಿಸಿದ ಕೆಲವು ಪ್ರಸಂಗಗಳ ಪದ್ಯಗಳನ್ನು ಪ್ರಾಯೋಗಿಕ ವಿಮರ್ಶೆಗೊಳಪಡಿಸಿದರು. 'ಕೇವಲ ಸಾಹಿತ್ಯ ಪಠ್ಯಗಳಾಗಿಯೂ ಕೂಡ ಯಕ್ಷಗಾನ ಕಾವ್ಯಗಳನ್ನು ಓದುವುದು ಸಾಧ್ಯ' ಎಂಬುದು ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು.



ಸನ್ಮಾನ ಸ್ವೀಕರಿಸಿದ ಪ್ರೊ. ಎಂ. ಎಲ್ ಸಾಮಗ ಮತ್ತು ಬೊಟ್ಟಿಕೆರೆ ಪುರುಷೋತ್ತಮ ಪೂಂಜ

ಸಂಕಿರಣದಲ್ಲಿ ಮಹಾಭಾರತದ ಪ್ರಸಂಗಗಳ ಬಗ್ಗೆ ಪ್ರಬಂಧ ಮಂಡಿಸಿದ ಲೇಖಕ ಪೃಥ್ವಿರಾಜ್ ಕವತ್ತಾರ್ ಅವರು "ಭಾರತದಲ್ಲಿ ಅನೇಕ ಬಗೆಯ ಮಹಾಭಾರತಗಳಿದ್ದು ಅವುಗಳಲ್ಲಿ ಯಕ್ಷಗಾನ ಮಹಾಭಾರತಗಳಿಗೆ ಪ್ರತ್ಯೇಕವಾದ ಸ್ಥಾನವಿದೆ' ಎಂದು ಹೇಳಿದರು. 'ಅಂದರೆ ಒಂದು ಕೇಂದ್ರಕ್ಕೆ ಬದ್ಧವಾಗದೇ ಅನೇಕ ಕೇಂದ್ರಗಳಿರುವ ಯಕ್ಷಗಾನ ಪ್ರಸಂಗಗಳನ್ನು ವಿಶೇಷವಾದ ಅಧ್ಯಯನಕ್ಕೆ ಒಳಪಡಿಸಬೇಕಾದ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

ಯಕ್ಷಗಾನ ಸಾಹಿತ್ಯ ಮತ್ತು ಸಂಗೀತದ ಕುರಿತು ಪ್ರಾತ್ಯಕ್ಷಿಕೆ ನೀಡಿ ಮಾತಾಡಿದ ಖ್ಯಾತ ಭಾಗವತ ಬೊಟ್ಟಿಕೆರೆ ಪುರುಷೋತ್ತಮ ಪೂಂಜ ಅವರು "ಯಕ್ಷಗಾನ ಪ್ರಸಂಗಗಳಲ್ಲಿ ಅಂಶಗಣದ ಛಂದಸ್ಸುಗಳೇ ಪ್ರಧಾನವಾಗಿದ್ದು ಅವು ಹಾಡಲು ಅನುಕೂಲವಾಗಿವೆ ಮತ್ತು ಈ ದೇಸಿ ಛಂದಸ್ಸುಗಳನ್ನು ನಾವೀಗ ಮತ್ತೆ ಚರ್ಚೆಯ ಮುನ್ನೆಲೆಗೆ ತರಬೇಕಾಗಿದೆ ಎಂದು ಹೇಳಿದರು. ಸಂಕಿರಣವನ್ನು ಸಂಯೋಜಿಸಿದ ಡಾ. ಪುರುಷೋತ್ತಮ ಬಿಳಿಮಲೆಯವರು 'ಯಕ್ಷಗಾನ ಪ್ರಸಂಗಗಳ ಮೂಲಕ 16, 17 ಮತ್ತು 18 ನೇ ಶತಮಾನಗಳನ್ನು ಕತ್ತಲ ಯುಗ ಎಂದ ಕರೆದ ಕನ್ನಡ ಸಾಹಿತ್ಯ ಚರಿತ್ರೆಕಾರರ ಧೋರಣೆಗಳನ್ನು ಬದಲಾಯಿಸಬೇಕಾಗಿದೆ' ಎಂದರು.



ಯಕ್ಷಗಾನ ಕಂಸ ವಿವಾಹ ಮತ್ತು ಕಂಸವಧೆ

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರು ಸಂಕಿರಣವನ್ನು ಉದ್ಘಾಟಿಸಿದರು. ಪಟ್ಲ ಫೌಂಡೇಷನ್ ಟ್ರಸ್ಟ್‌ನ ಅಧ್ಯಕ್ಷ ಸತೀಶ್ ಪಟ್ಲ ಅವರು ಎಲ್ಲರನ್ನೂ ಸ್ವಾಗತಿಸಿದರು. ಲೇಖಕ ಡಾ. ಅವನೀಂದ್ರನಾಥ ರಾವ್ ಅವರು ಕಾರ್ಯಕ್ರಮ ನಡೆಸಿಕೊಟ್ಟರು.

ಇದೇ ಸಂದರ್ಭದಲ್ಲಿ ಹಿರಿಯ ಕಲಾವಿದರಾದ ಶ್ರೀ ಎಂ. ಎಲ್ ಸಾಮಗ ಮತ್ತು ಬೊಟ್ಟಿಕೆರೆ ಪುರುಷೋತ್ತಮ ಪೂಂಜ ಅವರನ್ನು ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದ ಕೊನೆಗೆ ತೆಂಕುತಿಟ್ಟು ಯಕ್ಷಗಾನದ ಖ್ಯಾತ ಕಲಾವಿದರ ಕೂಡುವಿಕೆಯಿಂದ 'ಕಂಸ ವಿವಾಹ ಮತ್ತು ಕಂಸ ವಧೆ' ಯಕ್ಷಗಾನ ಪ್ರಸಂಗವನ್ನು ಯಶಶ್ವಿಯಾಗಿ ಪ್ರದರ್ಶಿಸಲಾಯಿತು.

ಯಕ್ಷಧ್ರುವ ಪಟ್ಲ ಫೌಂಡೇಷನ್ ಟ್ರಸ್ಟ್‌ನ ದೆಹಲಿ ಘಟಕದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆಯವರು ಇಡೀ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸಿದರು. ಫೌಂಡೇಶನ್‌ನ ಕಾರ್ಯದರ್ಶಿ ಪೃಥ್ವಿ ಕಾರಿಂಜೆ ಕಾರ್ಯಕ್ರಮ ನಿರೂಪಿಸಿದರು.

**ವಸಂತ ಶೆಟ್ಟಿ ಬೆಳ್ಳಾರೆ**

# ಆದರ್ಶಮಯ ಕಲಾಂ ಜೀವನ ಧರ್ಮ

ಬೆಂಗಳೂರು ನಗರದಲ್ಲಿ ಜರಗಿದ ವಿಜ್ಞಾನಲೋಕಕ್ಕೆ ಸಂಬಂಧಪಟ್ಟ ಸಮಾವೇಶವೊಂದರಲ್ಲಿ ಮಾತಾನಾಡುತ್ತಾ ಪ್ರೊ. ಯು.ಆರ್. ರಾವ್ ಹೇಳಿದ್ದು ರಕ್ಷಣಾ ಕ್ಷೇತ್ರದ ಶೂನ್ಯ ಸಂಪಾದನೆ ಹಾಗೂ ಸ್ವದೇಶಿಯವಾಗಿ ಒಂದು ಮೊಳೆಯನ್ನು ತಯಾರಿಸುವ ಶಕ್ತಿ ನಮಗಿಲ್ಲ ಹಾಗೂ ದೇಶದ 70000 ಏರೋಸ್ಪೇಸ್ ವಿಜ್ಞಾನಿಗಳ ಕಾರ್ಯಶೀಲತೆ ಕುರಿತು ಟೀಕಿಸುತ್ತಾ ಒಂದು ಪ್ರಯಾಣಿಕ ವಿಮಾನ ತಯಾರಿಸಲು ವಿಫಲರಾಗಿದ್ದಾರೆ. ಈ ಹೇಳಿಕೆಯಿಂದಾಗಿ ವಿವಿಧ ಸಾಧನೆಯನ್ನು ಸಾಧಿಸಿದ ರಕ್ಷಣಾ ಕ್ಷೇತ್ರ ಅವರ ಸಹೋದ್ಯೋಗಿ ಮಿತ್ರರಿಂದ ಆದಿಯಾಗಿ ನಾವೆಲ್ಲಾ ದುಃಖಿತರಾಗಿದ್ದೇವೆ.

ಈ ವಾರ ಬ್ರಹ್ಮೋಸ್ ಹಾಗೂ ಅಗ್ನಿ-4 ಕ್ಷಿಪಣಿ ಯಶಸ್ವಿಯಾಗಿ ಪರೀಕ್ಷೆಗಳನ್ನು ನಡೆಸಿ ನಮ್ಮವರು ಸಂತೋಷ ಪಟ್ಟಿದ್ದಾರೆ.

ಕಲಾಂ ಜೀವನ ಧರ್ಮ ಇಂದಿಗೂ ಪ್ರಸ್ತುತ ಹಾಗೂ ದೇಶದ ರಕ್ಷಣಾ ಸಚಿವರ ವೈಜ್ಞಾನಿಕ ಸಲಹೆಗಾರರಾಗಿ, ಇಸ್ರೋ ಹಾಗೂ ಡಿ. ಆರ್. ಡಿ.ಓ.ದಲ್ಲಿ ದುಡಿದು, ರಾಷ್ಟ್ರಪತಿ ಸ್ಥಾನಕ್ಕೆ ಮೆರಗು ನೀಡಿದ ದಿ. ಡಾ ಕಲಾಂ ಅವರೆಂದೂ ಸಹ ವಿಜ್ಞಾನಿಗಳನ್ನು ಟೀಕಿಸಿದವರಲ್ಲ. ಈ ದೇಶದಲ್ಲಿ ರಕ್ಷಣಾ ಕ್ಷೇತ್ರದ ಸಂಶೋಧನೆಗಳಲ್ಲಿ ಎದುರಿಸುವ ಸೋಲುಗಳನ್ನು ತಾಳಿಕೊಳ್ಳಲು ಆಗದ ರಾಜಕಾರಣಿಗಳಿಗೆ, ಆಮದು ಮಾಡಲು ಸಿದ್ಧರಾಗಿ ನಿಂತ ನಮ್ಮ ಸೈನ್ಯ ಹಾಗೂ ಕಿಕ್ ಬಾಕ್ ಜಾಲದಲ್ಲಿರುವ ಪ್ರವೃತ್ತಿಗಳು ಮುಂತಾದವರಿಗೆ ಭಾರತ ಸ್ವಾವಲಂಬನೆಯನ್ನು ಪಡೆಯುವುದು ಬೇಡ ಆಗಿದೆ. ಇಚ್ಛಾಶಕ್ತಿಯ ಕೊರತೆ, ಕುಗ್ಗಿರುವ ಆಗಿರುವ ದೇಶಪ್ರೇಮ, ಐ.ಎ.ಎಸ್. ಗಳಿಗೆ ಸರಿಗಟ್ಟಲಾಗದ ಸಂಬಳ, ಸವಲತ್ತುಗಳು, ಪ್ರತಿಭಾ ಪಲಾಯನ, ಹೀಗೆ ಒಂದೇ ಎರಡೇ. .ಹೇಳಿ ಈ ಎಲ್ಲಾ ಸಂಕಷ್ಟಗಳೊಂದಿಗೆ ದಿ. ಡಾ. ಕಲಾಂರ ಪಾಲಿಸಿಕೊಂಡ ತತ್ವಗಳು ಇಂದಿಗೂ ಪ್ರಸ್ತುತ.

1) ನಮ್ಮದೇ ವಿಜ್ಞಾನಿಗಳಿಗೆ ಪ್ರೋತ್ಸಾಹ, ಆತ್ಮವಿಶ್ವಾಸ ಹಾಗೂ ಅವರಲ್ಲಿ ಅಚಲ ನಂಬಿಕೆ ಮೂಡಿಸಿ ಒಂದು ತಂಡವಾಗಿ ಸ್ವದೇಶಿ ತಯಾರಿಕೆಯಲ್ಲಿ ದೃಢ ಹೆಜ್ಜೆ.

2) ನಮ್ಮ ದೊಡ್ಡ ಪ್ರಮಾಣದ ಜನಸಂಖ್ಯೆಯಲ್ಲಿರುವ ಯುವ ಶಕ್ತಿಯೇ ನಮ್ಮ ದೊಡ್ಡ ಶಕ್ತಿ.



**ಕಲಾಂ ಅವರೊಂದಿಗೆ ಕೆ. ಜಯಪ್ರಕಾಶ್ ರಾವ್**

3) ಸಾಧ್ಯವಿದಷ್ಟು ಸ್ವದೇಶದಲ್ಲಿಯೇ ಮೂಲ ಸೌಲಭ್ಯ ನಿರ್ಮಾಣ, ವಿವಿಧ, ಸಂಶೋಧನಾ ಕೇಂದ್ರ, ಭಾರತೀಯ ವಿಜ್ಞಾನ ಸಂಸ್ಥೆ, ಐಐಟಿಗಳು, ಖಾಸಗಿ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳೊಂದಿಗೆ ಕೈ ಜೋಡಿಸಿ ಜೊತೆ ಜೊತೆಯಲ್ಲಿ ಸಾಧನೆಗಾಗಿ ಪ್ರಯತ್ನ.

ನರಸಿಂಹರಾವ್, ಜಾರ್ಜ್ ಫರ್ನಾಂಡೀಸ್, ಏಂಟನಿ, ಪ್ರಣಬ್ ಮುಖರ್ಜಿ ಮುಂತಾದ ಈ ದೇಶದ ರಕ್ಷಣಾ ಮಂತ್ರಿಗಳೆಲ್ಲಾ ಡಾ. ಕಲಾಂರ ಈ ಸಂಘಟಿತ ಯತ್ನಕ್ಕೆ ಸಹಕಾರ ನೀಡಿದ್ದಾರೆ.

ಮಹಾಸಾಧನೆ ಮಾಡುತ್ತಿರುವ ಇಸ್ರೋ ಸಂಸ್ಥೆಗೆ ಒಂದೇ ಗುರಿಯ ನಾಗರಿಕ ಉದ್ದೇಶ ಹೊಂದಿದ 'ಉಪಗ್ರಹ' ಯೋಜನೆಯಾದರೆ, ಉಳಿದ ರಕ್ಷಣಾ ಸಂಸ್ಥೆಗಳಿಗೆ ಸೈನಿಕರಿಗೆ ನೀಡುವ ಚಪಾತಿಯಿಂದ ಹಿಡಿದು ಟ್ಯಾಂಕ್ ಯುದ್ಧ ವಿಮಾನ, ಕ್ಷಿಪಣಿ, ಟೋರ್ಪೆಡೊ . . . .ಒಂದೇ ಎರಡೇ.

ಚೀನ ಮತ್ತು ಪಾಕಿಸ್ತಾನಗಳಿಂದ ಯಾವುದೇ ಕ್ಷಣದ ಯುದ್ಧದ ಕೃತಕ ಭೀತಿ, ಮಾಧ್ಯಮದವರ ಕುಚೋದ್ಯ , ಹಣದ ಆಸೆಗಾಗಿ ಕಾದಿರುವ ಭಟ್ಟಂಗಿಗಳು, ಬೇಡಿಕೆಯ ಅವಸರ ಹಿಡಿಯುವ ನಮ್ಮ ಸೈನ್ಯ ನಾಗಲೋಟದಿಂದ ನೆಗೆಯುವ ತಂತ್ರಜ್ಞಾನ, ಯುವಕರ ಪ್ರತಿಭಾ ಪಲಾಯನ. ಹೀಗೆ ಅಸಂಖ್ಯ ಕಷ್ಟಗಳ ಸರಮಾಲೆ. . . . .

ಈ ಎಲ್ಲಾ ವೈರುಧ್ಯಗಳ ನಡುವೆಯೂ ಡಾ. ಕಲಾಂ ಅಂಥವರು ಎಂದೂ ನಮ್ಮ ಕೈ ಬಿಟ್ಟಿಲ್ಲ ಯಾರೊಬ್ಬರ ಬಗ್ಗೆಯಾಗಲಿ, ದೇಶದ ಹಿನ್ನಡೆ ಎಂದು ಪ್ರಲಾಪಿಸದೇ ವಿಷನ್ 2020 ಎಂದು ಘೋಷಿಸಿ ಭಾರತ ಮುಂದೊಂದು ದಿನ ಪ್ರಬುದ್ಧಮಾನ ರಾಷ್ಟ್ರವಾಗುತ್ತದೆ ಎಂದು ಇಡೀ ದೇಶವನ್ನೇ ಹುರಿದುಂಬಿಸಿದರು. ನಮ್ಮ ಶಕ್ತಿಯ ಪರಿಚಯ ಮಾಡಿ ಕೊಟ್ಟು, ಜಗತ್ತೇ ಓಹೋ ಇಂಡಿಯಾ ಎಂದು ಉದ್ಗರಿಸುವಂತೆ ಮಾಡಿದರು. ಇವತ್ತೂ ಕೂಡ ವಿದೇಶದಲ್ಲಿ ಈ ಅಭಿಮಾನದ ಅಲೆ ಇನ್ನೂ ಇದೆ.

ಏನು ಆಗಿಲ್ಲವಾದರೆ 'ತೇಜಸ್' ಯುದ್ಧ ವಿಮಾನ, ಬ್ರಹ್ಮೋಸ್, ಪೃಥ್ವಿ, ನಾಗ್, ಆಕಾಶ್ ಕ್ಷಿಪಣಿಗಳು, ಅರ್ಜುನ್ ಟ್ಯಾಂಕ್, ಇವೆಲ್ಲಾ ಮಾಡಿದ್ದು ಯಾರು? ಎಲ್ಲರ ಕೈಯಲ್ಲಿ ವಿದೇಶಿ ವಾಚು, ಅಂಡ್ರೊಯಿಡ್ ಫೋನ್, ಆಧುನಿಕ ಕಾರು ಬೇಕು ಎಂದಿದ್ದರೆ, ನಮ್ಮ ಆಯುಧಗಳು ಸಿದ್ಧವಾಗುವವರೆಗೆ ರಕ್ಷಣಾ ಕಾರ್ಯದಲ್ಲಿ ಗಡಿಯಲ್ಲಿರುವ ಸೈನಿಕ ಬಂಧುಗಳಿಗೆ, ಕ್ಷಿಪ್ರಕಾರ್ಯಕ್ಕೆ ಆಧುನಿಕ ಶಸ್ತ್ರಾಸ್ತ್ರ ಆಮದು ಮಾಡಿದರೆ ತಪ್ಪು ಹೇಗಾಗುತ್ತದೆ. ಹಾಗೆ ನೋಡಿದರೆ ನಮ್ಮ ಉಪಗ್ರಹ ಉಡಾವಣೆಯಲ್ಲಿ ವಿದೇಶಿ ನಿರ್ಮಿತ ಸಲಕರಣೆಗಳು ಎಷ್ಟಿಲ್ಲ ಹೇಳಿ? ಉಪಗ್ರಹ ಹಾಗೂ ಯುದ್ಧ ವಿಮಾನಗಳ ನಿರ್ಮಾಣ ವೆಚ್ಚವನ್ನು ಹೋಲಿಸುವುದು ತಪ್ಪು.

ಸ್ವದೇಶಿಯ ಪ್ರಯಾಣಿಕ ಸಣ್ಣ ವಿಮಾನದ ಸಂಶೋಧನೆ ಹಾಗೂ ವಿನ್ಯಾಸ ಮಾಡುತ್ತಿದ್ದ ಪ್ರತಿಷ್ಠಿತ ಎನ್.ಎ. ಎಲ್. (ರಾಷ್ಟ್ರೀಯ ವೈಮಾನಾಂತರಿಕ್ಷ ಪ್ರಯೋಗಾಲಯ) ವಿಜ್ಞಾನಿಗಳು ಕೆಲವು ವರ್ಷಗಳ ಹಿಂದೆ ನೆಡೆದ 'ಸರಸ್' ವಿಮಾನ ಪತನದ ಸೋಲಿನಿಂದ ಚೇತರಿಸಿಕೊಳ್ಳುತ್ತಿದ್ದಾರೆ. ಅವರಿಗೆಲ್ಲಾ ಪ್ರೋತ್ಸಾಹ, ಆತ್ಮ ವಿಶ್ವಾಸ ನೀಡುವ ಓರ್ವ ಗಾಡ್ ಫಾದರ್ ಬೇಕಾಗಿದೆ. ಈ ಸಂಸ್ಥೆ ಮುಂದೆ ಹೋಗಲು ಇನ್ನೂ ಸರಕಾರದ ಧನ ವಿನಿಯೋಗ ಆಗಿಲ್ಲ. ಅವರೇನು ಮಾಡಬೇಕು ಹೇಳಿ ಹಾಗೆಯೇ ಅಪಘಾತದ ಸೋಲಿನಿಂದ ಹೆಚ್.ಎ.ಎಲ್‌ನ 'ಟಿ.ಜೆ.ಟಿ' (ಇಂಟರ್ ಮಿಡಿಯೆಟ್ ಜೆಟ್ ಟ್ರೈನರ್) ಹಾಗೂ ಡಿ. ಆರ್.ಡಿ.ಓ.ದ AIW&C (ವೈಮಾನಾಂತರಿಕ್ಷರಾಡರ್ ವ್ಯವಸ್ಥೆ) ಬಹಳ ವರ್ಷಗಳ ಬಳಿಕ ಪುನಶ್ಚೇತನಗೊಂಡಿದೆ.

ನಮ್ಮ ಎ.ಡಿ.ಎ ಹಾಗೂ ಡಿ.ಆರ್.ಡಿ.ಓ. ಸಂಸ್ಥೆಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಇಸ್ರೋದಿಂದ ಬಂದ ವಿಜ್ಞಾನಿಗಳದ್ದಾರೆ. ಹಲವಾರು ಸಂಘಟಿತ ರಕ್ಷಣಾ ಯೋಜನೆಗಳಲ್ಲಿ ನೀವು ಸದಸ್ಯರಾಗಿ ಪಾಲುಗೊಂಡಿದ್ದೀರಿ. ಈಗ ನಿಮ್ಮಿಂದ ದೂರ ಸರಿದರೆ ಹೇಗೆ? ಇಸ್ರೋದಿಂದ ಬಂದ ಪ್ರಿಯ ಮಿತ್ರ ವಿಜ್ಞಾನಿಗಳೊಂದಿಗೆ ನಾವು ಸುಖ ಕಷ್ಟಗಳಲ್ಲಿ ಭಾಗಿಯಾಗಿ ಸಂಶೋಧನಾ ಕಾರ್ಯದಲ್ಲಿ ಸುಖ ಪಟ್ಟಿದ್ದೇವೆ.

ಹಾ! ಇನ್ನೊಂದು ಪ್ರಾಮುಖ್ಯ ವಿಷಯ, ದೇಶದ ಪ್ರಥಮ ಲಘು ಯುದ್ಧ ವಿಮಾನ 'ತೇಜಸ್' ಇನ್ನೇನು ಕೆಲವು ತಿಂಗಳುಗಳಲ್ಲಿ ತ್ರಿರಂಗ ಬಣ್ಣ ಪಡೆದು ವಾಯು ಪಡೆಯನ್ನು ಸೇರಲಿದೆ. ಆಗ ನಾವೆಲ್ಲಾ ಜೊತೆಯಾಗಿ ಚಪ್ಪಾಳೆ ತಟ್ಟುವ ಕೆಲಸ ಅಷ್ಟೆ! 2016ರ ಜನವರಿ 26ರಂದು ದೆಹಲಿಯ ರಾಜಪಥದ ಮೇಲಿನ ಆಗಸದಲ್ಲಿ 'ತೇಜಸ್' ಹಾರಲಿದೆ ಎಂಬುದು ನಮ್ಮ ದೊಡ್ಡ ಸಂತೋಷ. ಈ ಸಾಧನೆಯನ್ನು ಮಾಡಿದ ಏ.ಡಿ.ಏ ಒಂದು ಸ್ವಾಯತ್ತತೆಯ(autonomous) ಸಂಸ್ಥೆ ಆದ ಕಾರಣ ಈ ಸಂಸ್ಥೆಯಲ್ಲಿ ನಿವೃತ್ತರಾಗುವ ಯಾರಿಗೂ ಪಿಂಚಣಿ ಇಲ್ಲ. ಕೆಂಪುಪಟ್ಟಿಯಿಂದಾಗಿ, ದೇಶದ 400 ಏರೋಸ್ಪೇಸ್ ವಿಜ್ಞಾನಿಗಳಿಗೆ ಪಿಂಚಣಿ ಇಲ್ಲ ಮುಂದೆಯೂ ಇಲ್ಲ. ಹೇಗಿದೆ ವಿಪರ್ಯಾಸ! ಆದರೂ ನಾವೆಲ್ಲ ಮುಂದಿನ ಗಣರಾಜ್ಯದಿನ ಕಣ್ಣು ಮಂಜಾಗಿಸಿ ಚಪ್ಪಾಳೆ ತಟ್ಟುತ್ತಾ ನಮ್ಮ ಕಷ್ಟ ಮರೆಯುತ್ತೇವೆ. ಏಕೆಂದರೆ ನಾವು ನಂಬಿದ್ದೇವೆ.-'ಮೇರಾಭಾರತ್ ಮಹಾನ್'ನೆಚ್ಚಿನ ಕಲಾಂ ತಾತ ರಾಮೇಶ್ವರದ ಗೋರಿಯಿಂದ ಕಣ್ಣುಮಿಟಕಿಸಿ ನಮ್ಮನ್ನೆಲ್ಲಾ ಹರಸುತ್ತಾರೆ. ನಮಗೆ ಅಷ್ಟೆಸಾಕು. ಭಾರತ್ ಮಾತಾಕಿ ಜೈ. ಸಬಕೊ ಸನ್ಮತಿ ದೇ ಭಗವಾನ್.

**ಕೆ. ಜಯಪ್ರಕಾಶ್ ರಾವ್**

**(ಲೇಖಕರು ನಿವೃತ್ತ ರಕ್ಷಣಾ ಸಂಶೋಧನಾ ಅಧಿಕಾರಿ, ಎ.ಡಿ.ಎ.ಹಾಗೂ ಡಿ.ಆರ್.ಡಿ.ಓ, ಬೆಂಗಳೂರು. ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರೂ ಆಗಿರುವ ಲೇಖಕರು ಅನುವಾದಿಸಿದ ಕಲಾಂ ಅವರ ಆತ್ಮಕಥೆ 'ಅಗ್ನಿಯ ರೆಕ್ಕೆಗಳು' ಜನಪ್ರಿಯ ಕೃತಿ.)**

# ಗುರುಗಾಂವ್‌ನಲ್ಲಿ ಕಲಾಂ ಜನ್ಮದಿನಾಚರಣೆ



ಸರಳ, ಸಜ್ಜನ ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ಜನ್ಮ ದಿನೋತ್ಸವ ಆಚರಣೆ. ಗುರುಗಾಂವ್‌ನಲ್ಲಿ ದಿನಾಂಕ 20/10/2019 ರಂದು ಜರಗಿತು. ಗುರುಗಾಂವ್ ಕನ್ನಡ ಕಲಿಕಾ ಕೇಂದ್ರದಲ್ಲಿ ಮಕ್ಕಳಲ್ಲಿ ಸ್ಫೂರ್ತಿ ತುಂಬಲು ಪ್ರತಿ ತಿಂಗಳು ಆಯಾ ತಿಂಗಳಲ್ಲಿ ಬರುವ ಮಹನೀಯರ ಜನ್ಮ ದಿನೋತ್ಸವನ್ನು ಆಚರಣೆ ಮಾಡಲಾಗುತ್ತದೆ. ಈ ಕಾರ್ಯಕ್ರಮದ ಮುಂದುವರೆದ ಭಾಗದಲ್ಲಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಜನ್ಮದಿನೋತ್ಸವವನ್ನು ಸರಳವಾಗಿ ಆಚರಿಸಲಾಯಿತು. ಸಂಘದ ಕಾರ್ಯಕರ್ತರು ಹೂ ಗುಚ್ಛ ಅರ್ಪಿಸಿದರು.

ಶ್ರೀಮತಿ ಸುಜಾತ ನಿಂಬಾಳ್ ಅವರು ಅಬ್ದುಲ್ ಕಲಾಂ ಅವರಿಗೆ ಮಕ್ಕಳೆಂದರೆ ನಮ್ಮ ಕನಸುಗಳನ್ನು ಸಾಕಾರಗೊಳಿಸಲು ಇರುವ ಯಂತ್ರವಲ್ಲ. ಮಕ್ಕಳಿಂದಲೂ ಕಲಿಯುವುದು ಸಾಕಷ್ಟಿದೆ ಎಂದು ನಂಬಿದ್ದರು. ಶಿಷ್ಯರಿಗೆ ನೆಚ್ಚಿನ ಗುರುವಾಗಿದ್ದ ಅವರು, ದೇಶದ ಉದ್ದಗಲಕ್ಕೂ ಇರುವ ವಿದ್ಯಾರ್ಥಿ ಸಮೂಹದಲ್ಲಿ ಸ್ಫೂರ್ತಿ ತುಂಬುವ ಅವಿರತ ಪ್ರಯತ್ನ ನಡೆಸಿದ್ದರು. ತಮಿಳುನಾಡಿನ ರಾಮೇಶ್ವರಂ ಬಳಿಯ ಪುಟ್ಟ ಹಳ್ಳಿಯೊಂದರ ಬಡ ಕುಟುಂಬದಲ್ಲಿ ಜನಿಸಿದ ಕಲಾಂ, ಮನೆ ಮನೆಗಳಿಗೆ ನಿತ್ಯ ಪತ್ರಿಕೆಗಳನ್ನು ಹಾಕುತ್ತಾ ಚಿಕ್ಕಂದಿನಿಂದಲೇ ಶ್ರಮಜೀವನವನ್ನು ರೂಢಿಸಿಕೊಂಡೇ ಬೆಳೆದವರು. ಪ್ರತಿಭೆಯೊಂದನ್ನೇ ಶಕ್ತಿಯಾಗಿಸಿಕೊಂಡ ಅವರು ವಿಜ್ಞಾನ, ತಂತ್ರಜ್ಞಾನ ಕ್ಷೇತ್ರಗಳಲ್ಲಿ ಪರಿಣತಿ ಸಾಧಿಸಿ, ದೇಶದ ಅತ್ಯುನ್ನತ ಸಾಂವಿಧಾನಿಕ ಹುದ್ದೆ ಅಲಂಕರಿಸುವವರೆಗೂ ಬೆಳೆದರು ಎಂದು ಸ್ಮರಿಸಿದರು.



**ಗುರುಗಾಂವ್ ಕನ್ನಡ ಸಂಘದಿಂದ ಎನ್.ಆರ್. ಸುರೇಶ್ ಅವರಿಗೆ ಬೀಳ್ಕೊಡುಗೆ**

ನಿರಂತರ ಶ್ರಮ, ಬದ್ಧತೆಗೆ ಅವರು ಅನ್ವರ್ಥವಾಗಿದ್ದರು. ಹೀಗಾಗಿಯೇ ಇಂದಿಗೂ ವಿದ್ಯಾರ್ಥಿಗಳ ನೆಚ್ಚಿನ ಆದರ್ಶ ವ್ಯಕ್ತಿ ಕಲಾಂ ಅವರ ಜನ್ಮದಿನಾಚರಣೆ ಆಯೋಜಿಸಲಾಗಿದೆ ಎಂದರು. ನಂತರ ಎಲ್ಲ ಮಕ್ಕಳು ಹೂವುಗಳನ್ನು ಅರ್ಪಿಸುತ್ತ ಮಹನೀಯನ ಭಾವ ಚಿತ್ರಕ್ಕೆ ನಮಿಸಿದರು.

ಗುರುಗಾಂವ್ ಕನ್ನಡ ವಲಯದಲ್ಲಿ ಕಿರಿಯರಿಗೆ ಅಣ್ಣನಾಗಿ ಮಾರ್ಗದರ್ಶನ ನೀಡುತ್ತಿದ್ದ ಸರಳ, ಸಜ್ಜನ ಎನ್.ಆರ್. ಸುರೇಶ್ ಅವರು ಕಳೆದ 24 ವರ್ಷಗಳಿಂದ ಹೀರೋ ಮೋಟೋ ಕಾರ್ಪ್ ಕಂಪನಿಯಲ್ಲಿ ಎ.ಜಿ.ಎಂ. ಆಗಿ ಸೇವೆ ಸಲ್ಲಿಸಿ, ವೈಯಕ್ತಿಕ ಕಾರಣಗಳಿಂದ ಐಚ್ಛಿಕ ಸೇವಾ ನಿವೃತ್ತಿ ಪಡೆದು ತಾಯ್ನಾಡಿಗೆ ತೆರಳುತ್ತಿದ್ದಾರೆ. ಅವರು ಗುರುಗಾಂವ್ ಕನ್ನಡ ಸಂಘಕ್ಕೆ ತನು ಮನದಿಂದ ಧನ ಸಹಾಯ ಮಾಡುತ್ತಿದ್ದರು. ಅವರು ಅಬ್ದುಲ್ ಕಲಾಂ ಜನ್ಮ ದಿನದಿಂದು ಕಲಿಕಾ ಕೇಂದ್ರಕ್ಕೆ ಬಂದು ಕಲಾಂ ಅವರಿಗೆ ಹೂವುಗಳನ್ನು ಅರ್ಪಿಸಿ ಮಾತನಾಡಿದರು. ಅಲ್ಲದೆ ತಾವು ನಡೆದು ಬಂದ ಜೀವನದ ಕುರಿತು ಮಾತನಾಡಿ, ಎಲ್ಲರಿಗೂ ಧನ್ಯವಾದ ಹೇಳಿದರು. ಸಂಘದ ಮಾರ್ಗದರ್ಶಿಯಾಗಿದ್ದ ಸುರೇಶ್ ಅವರನ್ನು ಅಭಿನಂದಿಸಿ ಬೀಳ್ಕೊಡಲಾಯಿತು.

ಕಾರ್ಯಕ್ರಮದಲ್ಲಿ ಅಧ್ಯಕ್ಷ ಸಾಯಿಪ್ರಸಾದ್, ಕಾರ್ಯದರ್ಶಿ ಕೃಷ್ಣಪ್ಪ, ಮರಿಬಸಪ್ಪ ಮತ್ತು ಹಲವು ಸದಸ್ಯರು ಭಾಗವಹಿಸಿದ್ದರು.

**ಚಂದ್ರಶೇಖರ ಜೋಳದರಾಶಿ**

## ಹಣವು ಹೆಣವಾದಾಗ



ಹೆಣವೇ ಹಣವ ನೋಡಿ
ನಕ್ಕು ಮಸಣ ಸೇರಿತು

ಉರುಳೋದ ಕಾಲದ ಕನಸಲ್ಲೇ ಕನವರಿಸುತ
ಮರೆಯಾದ ಮರೆಯಾಗಿಸುವ ಕಾಲದಿ

ಕಂಡಿದ್ದೆಲ್ಲ ಕಾರ್ಮೋಡ-ಬೆಳ್ಮೋಡ
ಎತ್ತ ಸಾಗಿದರೂ ಮತ್ತೆ ಬಾನೆತ್ತರವ ಬಾಚಿ ಸೇರದು

ಮಣ್ಣ ಮಹಿಮೆಗೆ ಸೋತು
ಬಂದು ರೂಪದಿ ಬಂದಿಳದು
ಬಂಧ-ಸಂಬಂಧಗಳ ಹಸಿರುಳಸಿ

ಭೂಗರ್ಭ ಸೇರಿತು
ಕಾಂಚಾಣದ ಕುರುಡು ತಲೆಯೆಂಬ ಮಡಿಕೆಯಲಿ
ವಿಷ ಬೀಜ ಬಿತ್ತಿಹುದು.

ಬತ್ತಿರುವ ಬೊಗಸೆಯು ಬೊಗಳುತಿಹುದು

ಕೇಡ ಬಯಸುತಿಹುದು
ನೆತ್ತಿಹತ್ತಿರುವ ಬೊಗಸೆಯು ಹತ್ತಲಾರದ ಆಗಸದ

ಚಂದಿರನ ಬಾಚಿತಬ್ಬೆಂದಿಹುದು
ಗಂಜಿ ಕಟ್ಟಿ ಕೋಟೆಕಟ್ಟಿದವನೆದೆಯಲಿ
ರೋಗದಾ ಬೇನೆ ತುಂಬಿಹುದು
ಅತ್ತ ಸಾಗಲಿ ಕತ್ತಲು ಇತ್ತಸಾಗಲಿ ಕತ್ತಲು

ಎತ್ತಸಾಗಲಿ ನಾ ಆ ಬ್ರಹ್ಮಕೆತ್ತಿದ
ಮೂರುದಿನವ ಹೊತ್ತು ಬೆತ್ತಲಾಯಿತು
ಅಂದು ನಡುವೆ ಐಶ್ವರ್ಯವ ಸುತ್ತಲಾಯಿತು
ಮುಂದಿಹುದು

ಬೆತ್ತಲೆಯ ಕತ್ತಲು
ನಿತ್ಯ ಹಚ್ಚಲೇ ಮೆಚ್ಚುವಾ ಪರಮಾತ್ಮನಿಗಿಷ್ಟವಾದ
ನ್ಯಾಯಾ-ನೀತಿಯ ದೀಪವಾ.?

**ಚಂದ್ರಶೇಖರ ಜೋಳದರಾಶಿ**

## ಅರಿವು ಮೂಡಿಸಿದ ಆಹಾರ ಮೇಳ




ಅಕ್ಟೋಬರ್ ತಿಂಗಳನಲ್ಲಿ ದಸರಾ ಮತ್ತು ದೀಪಾವಳಿಯ ಸಂಭ್ರಮದ ನಡುವೆ 'ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್' ತಮ್ಮ ಮಾಸಿಕ ಸಭೆಯಲ್ಲಿ 'ಸಾತ್ವಿಕ್ ಕುಕ್ಕಿಂಗ್ ಫಾರ್ ಹೆಲ್ದೀ ಲಿವಿಂಗ್' ಎಂಬ ಅರಿವು ಮೂಡಿಸುವ ಆಹಾರ ಪ್ರದರ್ಶನ ಕಾರ್ಯಕ್ರಮ ಆಯೋಜಿಸಿತು.

ಅಸೋಸಿಯೇಶನ್‌ನ ಸದಸ್ಯೆ ಶ್ರೀಮತಿ ಲಕ್ಷ್ಮೀ ಕಿಣಿ ಅವರು ಮೂರು ವ್ಯಂಜನಗಳನ್ನು ಪ್ರದರ್ಶಿಸಿದರು. "ನವಣೆ"ಯಿಂದ ಬಿಸಿಬೇಳೆ ಬಾತ್, ಕ್ವಿನೋವಾ ಉಪಯೋಗಿಸಿ ಗ್ರೀನ್ ಸಲಾಡ್, ಶುಗರ್‌ಲೆಸ್ ಡ್ರೈಫ್ರುಟ್ ರಬ್ಡಿ ಇವೆಲ್ಲವನ್ನು ಹೇಗೆ ಮಾಡಬೇಕೆಂದು ವಿವರವಾಗಿ ತೋರಿಸಿಕೊಟ್ಟರು. ಇವುಗಳನ್ನು ಹಂಚಿ ಎಲ್ಲರಿಗೂ ರುಚಿಯನ್ನು ಪರಿಚಯಿಸಿದರು. ನವಣೆ ಬಿಸಿಬೇಳೆ ಬಾತ್, ಶುಗರ್‌ಲೆಸ್ ರಬ್ಡಿ, ಕ್ವಿನೋವಾ ಸಾಲಾಡ್ ತುಂಬಾ ಸ್ವಾದಿಷ್ಟಕರವಾಗಿದ್ದವು. ಲಕ್ಷ್ಮೀ ಕಿಣಿ ಅವರಿಗೆ ಧನ್ಯವಾದವನ್ನು ಅರ್ಪಿಸುತ್ತಾ ಅವತ್ತಿನ ಸಭೆ ಮುಕ್ತಾಯಗೊಳಿಸಲಾಯಿತು.

***ರಾಜೇಶ್ವರಿ ಕಲ್ಲೂರ***

## ಬಾ. ಸಾಮಗರಿಗೆ ತುಳುಶ್ರೀ ಪ್ರಶಸ್ತಿ




ದಿಲ್ಲಿಯಲ್ಲಿ 30 ವರ್ಷಗಳ ಕಾಲ 'ತುಳುವೆರ್' ತುಳು ಮಾಸ ಪತ್ರಿಕೆ ನಡೆಸಿ, ದಿಲ್ಲಿ, ಚೆನ್ನೈ, ಮುಂಬೈ, ಹೈದರಾಬಾದ್, ಪಣಜಿಯಲ್ಲಿ ಒಟ್ಟು 5 ಅಖಿಲ ಭಾರತ ತುಳು ಸಮ್ಮೇಳನಗಳನ್ನು ಯಶಸ್ವಿಯಾಗಿ ಏರ್ಪಡಿಸಿ ತುಳು ಭಾಷಾ ಪ್ರಗತಿಗೆ ಅಪ್ರತಿಮ ಸೇವೆ ಸಲ್ಲಿಸಿದ್ದನ್ನು ಪರಿಗಣಿಸಿ, ತುಳುವೆರ್, ದೆಹಲಿ ಕನ್ನಡಿಗ ಪತ್ರಿಕೆಗಳ ಸಂಪಾದಕ ಬಾ.ಸಾಮಗ ಅವರಿಗೆ ಬರೋಡದಲ್ಲಿ ತುಳು ಸಂಘ ಏರ್ಪಡಿಸಿದ್ದ ಸಮಾರಂಭದಲ್ಲಿ ತುಳು ಕಾರ್ಯಕರ್ತ, ಕಲಾವಿದ ಎನ್.ಜೆ. ಮೆಂಡನ್ ಅವರು 'ತುಳುಶ್ರೀ' ಪ್ರಶಸ್ತಿ ನೀಡಿ ಸನ್ಮಾನಿಸಿದರು.



## ಓದುಗರ ಸ್ಪಂದನ




ಮಾನ್ಯ ಸಂಪಾದಕರಿಗೆ ಗೌರವಪೂರ್ವಕ ಶರಣು–ಶರಣಾರ್ಥಿಗಳು.
ದೆಹಲಿ ಕರ್ನಾಟಕ ಸಂಘದ 'ಅಭಿಮತ' ಪತ್ರಿಕೆ ನಿರಂತರವಾಗಿ ಬರುತ್ತಿದೆ. ಅಕ್ಟೋಬರ 2019ರ ಸಂಚಿಕೆ ಓದಿ ಸಂತಸ ಹಾಗೂ ಅಭಿಮಾನ ಪಟ್ಟೆನು. 'ಅಭಿಮತಕ್ಕೆ ಮೂವತ್ತು' ವರುಷ ತುಂಬಿದುದು ತಿಳಿಯಿತು. ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ಅವರು ಮೂವತ್ತು ವರುಷಗಳ ಅಭಿಮತದ ನೆನಪುಗಳನ್ನು ಮೆಲಕು ಹಾಕಿರುವುದು ಸಂದರ್ಭೋಚಿತವಾಗಿದೆ.

ನಾನು (ಸಿದ್ದಣ್ಣ ಲಂಗೋಟಿ) ಹಾಗೂ ನನ್ನ ಶ್ರೀಮತಿ ಡಾ. ಕಲ್ಯಾಣಮ್ಮ ಇಬ್ಬರೂ 1997ನೇ ಇಸ್ವಿ ಅಕ್ಟೋಬರ 4 ಹಾಗೂ 5ರಂದು ಹೊಸದಿಲ್ಲಿಗೆ ಕಲ್ಯಾಣನಾಡಿನ 18ನೇ ಶರಣಸಮ್ಮೇಳನಕ್ಕೆ ಬಂದಿದ್ದೆವು. ಆಗ ದೆಹಲಿ ಕರ್ನಾಟಕ ಸಂಘದಲ್ಲಿ ಉಳಿದುಕೊಂಡಿದ್ದೆವು. ಅಂದೇ ದೆಹಲಿ ಕರ್ನಾಟಕ ಸಂಘದ ಸದಸ್ಯರಾಗಿದ್ದೆವು. ಅಂದಿನಿಂದ ಇದೇ ಅಕ್ಟೋಬರ 2019ವರೆಗೆ 22 ವರುಷಗಳ ಕಾಲ 'ಅಭಿಮತ'ದ ಮೂಲಕ ದೆಹಲಿ ಕರ್ನಾಟಕ ಸಂಘದೊಂದಿಗೆ ಅಲ್ಲಿಯ ಕ್ರಿಯಾಶೀಲ ಕಾರ್ಯಕ್ರಮಗಳೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿದ್ದೇವೆ.

ರಾಷ್ಟ್ರದ ರಾಜಧಾನಿಯಲ್ಲಿ ದೆಹಲಿ ಕರ್ನಾಟಕ ಸಂಘವು–ಕರ್ನಾಟಕದ ಸಮಸ್ತ ಕನ್ನಡಿಗರು ಹೆಮ್ಮೆಪಡುವಂತೆ ಕಾರ್ಯನಿರ್ವಹಿಸುತ್ತಿರುವುದಕ್ಕೆ ತಮಗೆಲ್ಲ ಅನಂತ ಧನ್ಯವಾದಗಳು. ದೆಹಲಿಯ ಕರ್ನಾಟಕ ಸಂಘ ಹಾಗೂ ಅಭಿಮತ ಪತ್ರಿಕೆಗಳು ಪ್ರಪಂಚದೆಲ್ಲೆಡೆ ಹರಡಿಕೊಂಡಿರುವ ಕನ್ನಡಿಗರ ಹೃದಯಗಳನ್ನು ಬೆಸೆಯುವ ಕೊಂಡಿಯಂತೆ ಕಾರ್ಯ ಮುಂದುವರೆಸಲೆಂದು ಹೃದಯಾರೆ ಶುಭ ಹಾರೈಸುವೆವು.

ಇಂತೀ ಶರಣಗಳೊಂದಿಗೆ,

***ಸಿದ್ದಣ್ಣ ಲಂಗೋಟಿ ಹಾಗೂ***
***ಕಲ್ಯಾಣಮ್ಮ ಲಂಗೋಟಿ***
***ಸಾಹಿತಿ ದಂಪತಿಗಳು, ಬೆಳಗಾವಿ.***

ನಮ್ಮ 'ಅಭಿಮತ' ಪತ್ರಿಕೆಯ ಅಕ್ಟೋಬರ್‌ನ ಸಂಚಿಕೆಯನ್ನು ಓದಿ ತುಂಬಾ ಸಂತಸಗೊಂಡಿದ್ದೇನೆ. ಇದೀಗ ಪ್ರಸ್ತುತ ವರ್ಷದ ಪ್ರತಿ ಸಂಚಿಕೆಯೂ ಉತ್ತಮ ಬದಲಾವಣೆಯೊಂದಿಗೆ ಚಿತ್ತಾಕಾರ್ಷಕವಾಗಿ ಬರುತ್ತಿದೆ. ಮುಖ್ಯವಾಗಿ ಕಾರ್ಯಕ್ರಮಗಳ ಸಚಿತ್ರ ಲೇಖನಗಳಲ್ಲಿ ಉತ್ತಮ ಫೋಟೋ ಹಾಗೂ ಸುಂದರವಾದ ವರದಿಗಳು ಅಂದವನ್ನು ಹೆಚ್ಚಿಸುವುದರೊಂದಿಗೆ ಆಸಕ್ತಿದಾಯಕವಾದ ಅನುಭವ ನೀಡುತ್ತಿವೆ ಎಂದು ಖಂಡಿತಾ ಹೇಳಬಹುದು. ಮುಖಪುಟದ ಫೋಟೋಗಳ ಆಯ್ಕೆಯೂ ಇಡೀ ಸಂಚಿಕೆಯ ಶೋಭೆಗೆ ಕನ್ನಡಿ ಹಿಡಿದಂತಿದೆ.

ನಮ್ಮ ಸಂಘದ ಚಟುವಟಿಕೆಗಳನ್ನು ಹೀಗೆ ಸುಂದರವಾಗಿ ಪ್ರಸ್ತುತಪಡಿಸುತ್ತಿರುವ ಪ್ರಯತ್ನ ನಿಜವಾಗಿಯೂ ಸ್ತುತ್ಯಾರ್ಹ ಎಂದೆ ಹೇಳಬಹುದು. ಒಂದು ಕಾಲದಲ್ಲಿ ಸಂಘದ ಸಕ್ರಿಯ ಸದಸ್ಯರಾಗಿ ಇದೀಗ ಸ್ವಂತ ಊರಿನಲ್ಲಿ ನೆಲೆಸಿರುವ ನನ್ನಂಥವರಿಗೆ ಈ ಪತ್ರಿಕೆಯ ಮೂಲಕ ದೆಹಲಿಯ ಕನ್ನಡಪರ ಚಟುವಟಿಕೆಗಳ ದರ್ಶನಮಾಡಿಸುತ್ತಿರುವುದು ಅಭಿಮಾನದ ವಿಷಯವಾಗಿದೆ. ಹೀಗೆ ಸಂಚಿಕೆಯಿಂದ ಸಂಚಿಕೆಗೆ ಈ ಪತ್ರಿಕೆ ಬೆಳೆಯಲಿ ಎಂಬುದು ನಮ್ಮೆಲ್ಲರ ಅಭಿಮತವೂ ಹೌದು.

***ಕೆ. ಜಯಪ್ರಕಾಶ್ ರಾವ್,***
***ಮೈಸೂರು***

**ಶ್ರದ್ಧಾಂಜಲಿ**

## ಶಿಕ್ಷಕಿ ಜಯಮಾಲಾ ಶೆಟ್ಟಿ ನಿಧನ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯೆ ಶ್ರೀಮತಿ ಜಯಮಾಲಾ ಶೆಟ್ಟಿ ಅವರು ದಿನಾಂಕ 06.10.2019ರಂದು ಅಕಾಲಿಕವಾಗಿ ನಿಧನರಾದರೆಂಬುದನ್ನು ತಿಳಿಸಲು ವಿಷಾದಿಸುತ್ತೇವೆ. ಅವರು ಕೆಲಕಾಲ ದೆಹಲಿ ಕನ್ನಡ ಶಾಲೆಯಲ್ಲಿ ಶಿಕ್ಷಕಿಯಾಗಿಯೂ ಸೇವೆ ಸಲ್ಲಿಸಿದ್ದರು.

ಜಯಮಾಲಾ ಶೆಟ್ಟಿ ಅವರು ದೆಹಲಿ ಕನ್ನಡ ಶಾಲೆಯ ಪ್ರಾಂಶುಪಾಲ ಪ್ರಶಾಂತ್ ಕುಮಾರ್ ಶೆಟ್ಟಿಯವರ ಧರ್ಮಪತ್ನಿ.

ಅಗಲಿದ ಜಯಮಾಲಾ ಶೆಟ್ಟಿಯವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.




ದೆಹಲಿ ಕರ್ನಾಟಕ ಸಂಘದ
ಸುಸಜ್ಜಿತವಾದ ಆರ್ಟ್ ಗ್ಯಾಲರಿ
ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.
ಹೆಚ್ಚಿನ ಮಾಹಿತಿಗಾಗಿ
ದೆಹಲಿ ಕರ್ನಾಟಕ ಸಂಘದ
ಕಾರ್ಯಾಲಯವನ್ನು ಸಂಪರ್ಕಿಸಿರಿ.
ದೂರವಾಣಿ : 011–26109615 / 26104818


# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ನೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-



ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ 13.10.2019ರಂದು ನಡೆದ ಪ್ರಥಮ ಚುಟುಕು ಸಾಹಿತ್ಯ ಸಮಾವೇಶದಲ್ಲಿ ಚಲನಚಿತ್ರ ನಟ, ಸಾಹಿತಿ, ಸಂಘಟಕ ತಾರಾನಾಥ್ ಬೋಳಾರ್ ಅವರನ್ನು ದೆಹಲಿ ಕರ್ನಾಟಕ ಸಂಘವು ಅಭಿನಂದಿಸಿತು.


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

Ph : 40520770
M : 9811104398, 9811604398

Delhi Karnataka Sangha Abhimata
Nov-2019, Vol. No.30, Issue No.2, Price Rs.1/-
RNI Regn. No. 53405/91, DL-SW-1/4016/19-21
Date of Publication : Nov 8th / 9th, Posting Date :10th / 11th, Total Pages-24, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

Banking has never been this Mobile !

KBL Mobile Plus

- Fund Transfer to own / within Bank Account / KBL QR
- IMPS / NEFT / RTGS Fund Transfer
- Utility Bill Payments / Mobile / DTH Recharge
- UPI Services, KBL M-Passbook & KBL Locator
- Online Deposit Account Opening, Account Statements & Enquiry
- Debit Card Controls
- Online KBL Suraksha Registration
- Donation to Temples - e-Hundi

& much more



conditions apply

Available on
GET IT ON Google Play
Download on the App Store

Words of precaution to the public

BEWARE! FAKE SMS SCAM

Governor, RBI or bank or any such other organisation does not send mails or SMSs asking you to deposit money to transfer a large sum of money to your account. Do not be a victim of such frauds.

Call toll free no. 1800 425 1444 or Contact our nearest branch for details Follow us on / karnatakabank

Karnataka Bank
Your Family Bank. Across India.

Regd. Head Office: Mangaluru - 575 002 CIN: L85110KA1924PLC001128 E-mail: info@ktkbank.com Visit us at: www.karnatakabank.com